
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಪುಟ : 37 ಸಂಚಿಕೆ : 11 ಮನ್ಮಥ–ವೃಶ್ಚಿಕ ಕಲಿಯುಗಾಬ್ದ 5117 15–01–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಸಾಮಾಜಿಕ ಸಮರಸತೆ: ಕೃತಿರೂಪದಲ್ಲಿ ಬರಲಿ ಉದಾತ್ತ ಚಿಂತನೆ

**ನಮ್ಮ ಸಮಾಜದ ಅತ್ಯಂತ ಪ್ರಮುಖ ಅಗತ್ಯಗಳಲ್ಲಿ ಸಾಮಾಜಿಕ ಸಮರಸತೆಯೂ ಒಂದು. ಈ ನಿಟ್ಟಿನಲ್ಲಿ ಚಿಂತನೆ ಮತ್ತು ಆಚರಣೆಗೆ ಯೋಗ್ಯವಾದ ಕೆಲವು ಅಂಶಗಳು ಇಲ್ಲಿವೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ನಾಗಪುರದಲ್ಲಿ ಡಿಸೆಂಬರ್ 16, 2016 ರಂದು ಸಾಮಾಜಿಕ ಸಮರಸತೆಯ ಕುರಿತಾಗಿ ಮಾಡಿದ ಭಾಷಣದ ಆಯ್ದ ಭಾಗ ಇದು.**

- ಒಂದೇ ಸಮಾಜದ ಒಳಗಿನ ಜನರು ತಮ್ಮತಮ್ಮೊಳಗಿನ ಸ್ಥಿತಿಗತಿಗಳ, ಸ್ಥಾನ–ಗೌರವಗಳ ಕುರಿತಾಗಿ ವಿಷಮತೆಯ ವ್ಯವಹಾರ ನಡೆಸುತ್ತಿದ್ದರೆ, ಜೊತೆಗೆ ಮೇಲು–ಕೀಳಿನ ತಾರತಮ್ಯ ನಡೆಯುತ್ತಿದೆಯಾದರೆ ಆ ಸಮಾಜವು ತನ್ನ ಉನ್ನತಿಯ, ಒಳಿತಿನ ಆಸೆಯನ್ನು ಅಪೇಕ್ಷಿಸುವಂತೆಯೇ ಇಲ್ಲ. ಸಮಾಜದ ಪ್ರಗತಿಗೆ ಅಗತ್ಯವಾದ ಒಂದು ಅಂಶ ಏಕತೆ. ಸಮಾನತೆಯಿಲ್ಲದೆ ಸಾಮಾಜಿಕ ಏಕತೆ ಅಸಾಧ್ಯ. ಪ್ರಕೃತಿಯು ತನ್ನ ಸೃಷ್ಟಿಯಲ್ಲಿ ಪ್ರತಿಯೊಬ್ಬ ಮನುಷ್ಯನನ್ನೂ ವಿಧವಿಧವಾಗಿ ರಚಿಸಿದೆ. ಆದರೆ ಪ್ರಕೃತಿಯು ವಿವಿಧತೆಯನ್ನು ಹೊರತುಪಡಿಸಿಯೂ, ಮಾನವ ನಿರ್ಮಿತ ಕಂದಕಗಳನ್ನು ದಾಟಿ ಸಮಾನತೆ ತರಲು ಸಾಧ್ಯವಿದೆ.

- ಭಾರತದಲ್ಲಿ ಹಿಂದೊಮ್ಮೆ ಜಾತಿಭೇದರಹಿತ ಸಮಾಜವೊಂದು ನಿರ್ಮಿತವಾಗಿತ್ತು ಎಂಬುದು ಸತ್ಯ ಸಂಗತಿ. ಆದರೆ ಕ್ರಮೇಣ ತಾವು ರೂಢಿಸಿಕೊಂಡದ್ದನ್ನು ಸಮರ್ಥಿಸಲು ಯಾವುದೋ ಪುರಾವೆ ಬೇಕಾಯಿತು. ಪ್ರಾಯಶಃ ಶಾಸ್ತ್ರಗಳ ಮೊರೆ ಹೋಗಿ ಸತ್ಯಾಸತ್ಯತೆಗಳ ಬಗ್ಗೆ ಚರ್ಚೆ, ಸಂವಾದ ನಡೆಸಿದ್ದರೆ ಸಾಮಾಜಿಕ ವಿಷಮತೆಯ ಸಮಸ್ಯೆ ಉಲ್ಬಣವಾಗುತ್ತಿರಲಿಲ್ಲ. ಆದರೆ ಈ ವಿಷಯವನ್ನು ಒಪ್ಪುವವರು, ಒಪ್ಪದವರು ತಮ್ಮ ತಮ್ಮ ವಕಾಲತ್ತುಗಳನ್ನು ಜೋಡಿಸುತ್ತ ಮೂಲ ವಿಷಯವನ್ನು ಬಿಟ್ಟು ಬೇರೊಂದು ಬೇಡದ ಚರ್ಚೆಗೆ ನುಗ್ಗಿದ್ದುದೇ ಪ್ರಮಾದವಾದದ್ದು.

- ಚಾಲ್ತಿಯಲ್ಲಿರುವ ಆಚರಣೆಗಳೇ ಧರ್ಮವಲ್ಲ. ಯಾವುದೇ ಆಚರಣೆಯ ಹಿಂದಿರುವ ಮೌಲ್ಯವನ್ನು ಗಮನಿಸಿ ಅದನ್ನು ಆಚರಿಸಬೇಕೋ ಬೇಡವೋ ಎಂಬುದನ್ನು ನಿರ್ಧರಿಸಬೇಕು ಎಂಬ ಡಾ। ಬಾಬಾಸಾಹೇಬ್ ಅಂಬೇಡ್ಕರ್ ಅವರ ಅರ್ಥಗರ್ಭಿತ ಮಾತುಗಳು ದುರ್ದೈವವಶಾತ್ ನಮಗೆ ಅಂದು ಕೇಳದೇ ಹೋಯಿತು. ಆಗ ಬಾಬಾ ಸಾಹೇಬರ ಮಾತುಗಳನ್ನು ನಾವು ಅರ್ಥೈಸಿಕೊಂಡು, ಅದರಂತೆ ನಡೆದುಕೊಂಡಿದ್ದರೆ ಬಹುಶಃ ಇಂದು ಈ ಮಟ್ಟದ ವಿಷಮತೆಯನ್ನು ನಮ್ಮ ದೇಶದಲ್ಲಿ ನೋಡುತ್ತಿರಲಿಲ್ಲವೇನೋ!

- ಎಲ್ಲೆಲ್ಲಿ ನಮ್ಮ ಇತಿಹಾಸದ ಪುಟಗಳಲ್ಲಿ ಈ ಭೇದಭಾವದ ಅಧ್ಯಾಯಗಳು ಬಂದಿವೆಯೋ ಅವನ್ನು ಖಂಡಿಸಬೇಕಿದೆ. ಧರ್ಮಕ್ಕೂ ಭೇದಭಾವದ ಆಚರಣೆಗಳಿಗೂ ಯಾವುದೇ ಸಂಬಂಧವಿಲ್ಲ. ಸಂಬಂಧವಿರುವುದು ನಾವು ಮಾಡಿಕೊಂಡ ಕಟ್ಟುಪಾಡುಗಳ ಜೊತೆಗೆ. ಕಟ್ಟುಪಾಡುಗಳು ಸಮಯಕ್ಕೆ ತಕ್ಕಂತೆ ಬದಲಾಗಬೇಕಿತ್ತು. ಆ ಬದಲಾವಣೆ ಆಗಲೇ ಇಲ್ಲ.

- ನಮ್ಮ ಆಚರಣೆಗಳನ್ನು ಕಾಲಕಾಲಕ್ಕೆ ಪರೀಕ್ಷಿಸುವ ಕೆಲಸ ನಿರಂತರವಾಗಿ ನಡೆಯಬೇಕಾದ್ದು. ಈ ಪರೀಕ್ಷೆಯನ್ನು ಕಳೆದ ಎರಡು ಸಾವಿರ ವರ್ಷಗಳಲ್ಲಿ ನಾವು ಎಂದೂ ಮಾಡಲಿಲ್ಲ. ಅದರ ಪರಿಣಾಮವಾಗಿಯೇ ಮೌಲ್ಯಗಳು ಬಿಟ್ಟು ಹೋದವು. ಬರಿಯ ಪದ್ಧತಿಗಳು ಬೆಳೆದು, ರೂಢಿಯಾಗಿ ಪರಿಣಮಿಸಿದವು. ಇದೀಗ ಅದುವೇ ನಮ್ಮ ಕೊರಳಿಗೆ ಬಿಗಿಯುವ ಹಗ್ಗವಾಗಿ ಪರಿಣಮಿಸಿದೆ. ಈ ವಿಷಮತೆಯನ್ನು ಮನಸ್ಸಿನಿಂದ ಕಿತ್ತೊಗೆಯಬೇಕಾಗುತ್ತದೆ. ನಾವು ಸರ್ವಥಾ ಈ ವಿಷಮತೆಯನ್ನು ಸಮರ್ಥಿಸುವುದಿಲ್ಲ ಎಂಬುದನ್ನು ನಮಗೆ ನಾವೇ ಹೇಳಿಕೊಂಡು, ಇದನ್ನು ಪ್ರೋತ್ಸಾಹಿಸುವ ಯಾವುದೇ ಕೆಲಸಗಳಲ್ಲಿ ತೊಡಗುವುದಿಲ್ಲವೆಂಬ ಸಂಕಲ್ಪ ಮಾಡಬೇಕಾಗುತ್ತದೆ.

- ಜಾತಿ ಬರುವುದಾದರೂ ಎಲ್ಲಿಂದ? ಯಾವುದೋ ಮನೆಯಲ್ಲಿ ಒಂದು ವೃತ್ತಿಯನ್ನು ಮಾಡುತ್ತಿದ್ದರೆ, ಆ ಮನೆಯಲ್ಲಿ ಜನ್ಮ ತಳೆದ ಮಗು ಆ ವೃತ್ತಿಯ ಜಾತಿಯನ್ನು ತನ್ನೊಟ್ಟಿಗೆ ಬೆರೆಸಿಕೊಂಡುಬಿಡುತ್ತದೆ. ಕೂಲಂಕುಷವಾಗಿ ಗಮನಿಸಿದರೆ ಜಾತಿ ಪದ್ಧತಿಯೇ ನಿಧಾನಗತಿಯಲ್ಲಿ ತನ್ನ ಅಸ್ತಿತ್ವವನ್ನು ಇಂದು ಕಳೆದುಕೊಳ್ಳಲಾರಂಭಿಸಿದೆ. ಇಂದು ವೃತ್ತಿ ಹಾಗೂ ಜಾತಿಗೆ ಯಾವುದೇ ಸಂಬಂಧವಿಲ್ಲ. ಸರಿಯಾದ ರೀತಿಯಲ್ಲಿ ಈ ವ್ಯವಸ್ಥೆ ಹೋದರೆ ಮಾತ್ರವೇ ಅದು ಈವರೆಗೆ ಮಾಡಿದ ಗಾಯವನ್ನು ಸರಿಪಡಿಸಬಹುದಾಗಿದೆ.



**ನಾವು ಒಂದೇ ಸಮಾಜದಲ್ಲಿ ಇಂದಿಗೂ ಹಿಂದುಗಳಾಗಿ ಗುರುತಿಸಿಕೊಂಡಿದ್ದೇವೆ. ಎರಡು ಸಾವಿರ ವರ್ಷಗಳಿಂದ ನಡೆದ ದಬ್ಬಾಳಿಕೆ, ದಮನಗಳನ್ನು ತಥಾಕಥಿತ ಕೆಳಜಾತಿಯವರು ಸಹಿಸುತ್ತಲೇ ಬಂದಿದ್ದಾರೆ. ಎಲ್ಲೋ ಕೆಲವರು ಪ್ರತಿರೋಧ ಒಡ್ಡುವ ಕೃತಿ, ಭಾಷಣ ರಚಿಸಿದ್ದರೂ, ಪ್ರತೀಕಾರದ ಘಟನೆಗಳು ನಡೆದಿರುವುದು ಈ ನೂರು ವರ್ಷಗಳಲ್ಲಿಯೇ. ಅದಕ್ಕೂ ಮುನ್ನ ಎಲ್ಲವನ್ನೂ ಸಹಿಸುತ್ತಲೇ, ನಮ್ಮ ಹಿಂದು ಸಮಾಜದ ಜೊತೆಗೆ ಇದ್ದುಕೊಂಡೇ ದೇಶಕ್ಕೆ ಕೊಡುಗೆ ನೀಡುತ್ತಿದ್ದಾರೆ. ಮೀಸಲಾತಿಯನ್ನು ಕೆಲವರು ವಿರೋಧಿಸುತ್ತಾರೆ. ಆದರೆ, ದಬ್ಬಾಳಿಕೆಯನ್ನು ಸಾವಿರಾರು ವರ್ಷಗಳಿಂದ ತಥಾಕಥಿತ ಕೆಳವರ್ಗದವರು ಸಹಿಸುತ್ತಾ ಬಂದಿದ್ದಾರೆ. ಹಾಗಿರುವಾಗ, ಉಳಿದವರು ಕೇವಲ ನೂರು ವರ್ಷಗಳ ಕಾಲವೂ ಮೀಸಲಾತಿಯನ್ನು ಸಹಿಸಲು ಸಾಧ್ಯವಾಗುವುದಿಲ್ಲವೇ? ಇದನ್ನು ಅರ್ಥಮಾಡಿಕೊಂಡು ತುಳಿತಕ್ಕೊಳಗಾದವರನ್ನು ಬೆಂಬಲಿಸುವುದು ನಮ್ಮ ಕರ್ತವ್ಯವಾಗಬೇಕು.**

**ಎಲ್ಲಿಯವರೆಗೆ ಸಾಮಾಜಿಕ ಭೇದಭಾವವಿರುತ್ತದೆಯೋ ಅಲ್ಲಿಯವರೆಗೆ ಸಾಮಾಜಿಕ ಮೀಸಲಾತಿ ಅವಶ್ಯಕತೆಯೂ ಇದ್ದೇ ಇರುತ್ತದೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘ ಬಲವಾಗಿ ನಂಬುತ್ತದೆ. ಸಮಾಜದಲ್ಲಿ ಭೇದಭಾವ ಇನ್ನಿಲ್ಲವಾದ್ದರಿಂದ ಮೀಸಲಾತಿಯ ಅಗತ್ಯವಿಲ್ಲವೆಂದು ಯಾರು ಭೇದಭಾವದ ಬಲಿಪಶುಗಳಾಗಿದ್ದರೋ ಅವರು ಹೇಳಬೇಕಾಗುತ್ತದೆ, ಬೇರೆಯವರಲ್ಲ.**

- ನಾವೀಗ ಈ ಎರಡು ಸಾವಿರ ವರ್ಷಗಳಿಂದ ಬಂದಿರುವ ರೂಢಿಯನ್ನೇ ಬದಲಿಸಬೇಕಾಗಿದೆ. ಸ್ವತಃ ನಮ್ಮಿಂದಲೇ ಈ ತರಹದ ಸುಧಾರಣಾ ಕೆಲಸ ನಡೆಯಬೇಕಿದೆ. ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ್ದು ನಮ್ಮ ಮಿತ್ರರ ಗುಂಪುಗಳಲ್ಲಿ ಸಮಾಜದ ಎಲ್ಲಾ ಜಾತಿಗಳನ್ನು ಪ್ರತಿನಿಧಿಸುವ ಸ್ನೇಹಿತರಿದ್ದಾರೆಯೇ ಎಂದು. ಅಲ್ಲದೇ ಅವರುಗಳ ಜೊತೆಗೆ ನಮ್ಮ ವ್ಯವಹಾರಗಳು, ಒಡನಾಟ ಸ್ವಾಭಾವಿಕವಾಗಿರುವುದೇ ಇಲ್ಲವೇ ಎಂಬುದನ್ನೂ ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ನಮ್ಮ ಸ್ನೇಹಿತರೆಲ್ಲರನ್ನೂ ಒಂದೇ ಸಮನಾಗಿ ಕಾಣುತ್ತೇನೆಯೇ? ಓದಿ, ಕೇಳಿ ನಾವು ಕಲಿತದ್ದನ್ನು ಮನಸ್ಸು, ಮಾತು, ಆಚರಣೆಗಳಲ್ಲಿ ಶ್ರದ್ಧೆಯಿಂದ ಅನುಸರಿಸಿ ಮುಂದುವರೆಸಿ ನಮ್ಮ ಸುತ್ತಲಿನ ಸಮಾಜದಲ್ಲಿ ಎಲ್ಲರೂ ಇದನ್ನು ಅನುಸರಿಸುವಂತಾದರೆ ಅದರಿಂದಾಗುವ ಪರಿಣಾಮ ಅತ್ಯಮೂಲ್ಯ.

- ನಮ್ಮ ಪ್ರಾಂತಗಳ ಭಾಷೆಗಳಲ್ಲಿ ರೂಢಿಗತವಾಗಿಯೇ ಎಷ್ಟೋ ಶಬ್ದಗಳು, ಗಾದೆಗಳು ಜಾತಿಸೂಚಕವಾಗಿವೆ. ಈ ರೂಢಿಯಿಂದ ಬಂದಿರುವ ಶಬ್ದಗಳನ್ನು ನಾವು ಬಳಸುವುದು ಯಾರನ್ನೋ ನಿಂದಿಸಲು ತಮಾಷೆ ಮಾಡಲು ಅಲ್ಲದಿರಬಹುದು. ಎಲ್ಲರನ್ನೂ ಸಮನಾಗಿ ಕಾಣುವ ನಿರ್ಮಲ ಮನಸ್ಸು ನಮ್ಮದಾಗಿರಬಹುದು. ಆದರೆ ರೂಢಿಗತವಾಗಿ ಬಂದಿರುವ ಈ ಪದಗಳ ಬಳಕೆಯಿಂದ ನಮಗೆ ತಿಳಿಯದೆಯೇ ಇನ್ನಾರಿಗೋ ನೋವುಂಟುಮಾಡುತ್ತಿರಬಹುದು. ಅವುಗಳ ಬಳಕೆಗೆ ಕಡಿವಾಣ ಹಾಕಬೇಕು. ಜಾತಿಸೂಚಕ, ನಿಂದಕ ಪದಗಳನ್ನು ಬಳಸದಿರುವ ಸಂಕಲ್ಪ ನಮ್ಮಲ್ಲಿ ಮಾಡಿಕೊಳ್ಳಬೇಕು.

- ನಮ್ಮಲ್ಲಿನ ಕೆಲವು ಮಹಾಪುರುಷರನ್ನು ಸಹಜವಾಗಿಯೇ ಪೂಜನೀಯ, ಮಾನನೀಯ ಎಂಬ ಮರ್ಯಾದಾಸೂಚಕ ಪದಗಳನ್ನು ಬಳಸಿ ಸಂಬೋಧಿಸುತ್ತೇವೆ. ಇನ್ನು ಕೆಲವರು ಮಹಾಪುರುಷರೇ ಆದರೂ ಅವರಿಗೆ ಹಾಗೆ ಹೇಳದೆಯೇ ಹೆಸರನ್ನಷ್ಟೇ ಬಳಸಿ ಸಂಬೋಧಿಸುತ್ತೇವೆ. ನಮ್ಮಲ್ಲಿ ದುಷ್ಟ ಭಾವನೆ ಇಲ್ಲದಿರಬಹುದು. ಆದರೆ ನಾವು ಆಡಿದ್ದನ್ನು ಮತ್ತೊಬ್ಬರು ಅರ್ಥೈಸುವಾಗ ಅದರಲ್ಲಿನ ದೋಷ ಕಂಡುಹಿಡಿಯುತ್ತಾರೆ. ಈ ನಿಟ್ಟಿನಲ್ಲಿಯೂ ನಮ್ಮ ಅಭ್ಯಾಸಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.

- ನಮ್ಮ ಕಾರ್ಯಕರ್ತರೊಬ್ಬರು ತಮ್ಮ ಹೊಸ ಮನೆಯ ಗೃಹಪ್ರವೇಶಕ್ಕೆ, ಅಲ್ಲಿ ನಡೆಯುವ ವಾಸ್ತು ಶಾಂತಿಗೆ ಅಲ್ಲಿನ ಸಂಘಚಾಲಕರಿಂದ ಮೊದಲುಗೊಂಡು ತಮ್ಮ ಕುಟುಂಬದ ಎಲ್ಲರನ್ನೂ, ಮನೆಗೆಲಸದವರನ್ನೂ, ಬಟ್ಟೆತೊಳೆದು ಇಸ್ತ್ರಿ ಮಾಡುವ ಲಾಂಡ್ರಿಯವರನ್ನು, ಮನೆ ಕಟ್ಟುವ ಕೆಲಸ ನಿರ್ವಹಿಸಿದರನ್ನು, ತಾವು ಸಾಮಾನ್ಯವಾಗಿ ಹೋಗುತ್ತಿದ್ದ ಕ್ಷೌರಿಕನನ್ನೂ ಸಕುಟುಂಬ ಸಮೇತರಾಗಿ ಆಮಂತ್ರಿಸಿ ಸತ್ಕಾರ ಮಾಡಿದ್ದರು. ಸಂಬಳ ಕೊಟ್ಟ ಮಾತ್ರಕ್ಕೆ ಸಂಬಂಧ ಮುಗಿಯುವುದಿಲ್ಲವಲ್ಲ! ಹೀಗೆ, ನಮ್ಮ ಕುಟುಂಬಗಳನ್ನು ವಿಸ್ತೃತ 'ಪರಿವಾರ'ವನ್ನಾಗಿಸುವ ಕೆಲಸವನ್ನು ಖಂಡಿತವಾಗಿಯೂ ಮಾಡಬೇಕಾಗುತ್ತದೆ. ಯಾಕೆಂದರೆ ಇದು ಸಂವೇದನೆಯ ಪ್ರಶ್ನೆ. ಸಮರಸತೆ ಎಂದರೆ ಅದು ಮನಸ್ಸಿನ ಸಂವೇದನೆಯೇ ಅಲ್ಲವೇ? ಅದು ಮನುಷ್ಯತ್ವದ ಭಾವವಲ್ಲವೇ? ಇನ್ನು ಮನೆಗಳಲ್ಲಿ ಕೆಲವರಿಗೆ ಅಂಗಳದವರೆಗೆ ಮಾತ್ರ ಪ್ರವೇಶ. ಮತ್ತೆ ಕೆಲವರಿಗೆ ಕೋಣೆಗಳಿಗೂ ಪ್ರವೇಶ. ಒಂದಷ್ಟು ಜನರಿಗೆ ಅಡುಗೆ ಮನೆಯವರೆಗೆ ಆಹ್ವಾನ. ಇನ್ನು ಪೂಜಾ ಕೊಠಡಿಗಂತೂ ಕೇವಲ ವಿಶೇಷ ಮಂದಿಗೆ ಮಾತ್ರ ಪ್ರವೇಶ ಎಂಬ ರೀತಿಗಳು ರೂಢಿಯಲ್ಲಿಯೇ ಬಂದಿದ್ದರೂ ಈಗಿನ ದಿನಗಳಲ್ಲಿ ಬದಲಾವಣೆ ಸಾಧ್ಯವಿಲ್ಲವೇ? ಈ ವಿಷಯವಾಗಿಯೂ ಚಿಂತಿಸಬೇಕಾಗುತ್ತದೆ.

- ಇನ್ನು ಸಾಮಾಜಿಕ ವ್ಯವಹಾರದ ಕಡೆಗೆ ಸ್ವಲ್ಪ ಗಮನಹರಿಸೋಣ. ಇದರಲ್ಲಿ ರೋಟಿ ವ್ಯವಹಾರ ಮತ್ತು ಬೇಟಿ ವ್ಯವಹಾರ ಎಂಬ ಎರಡು ಪದ್ಧತಿಗಳು. ರೋಟಿ ವ್ಯವಹಾರ ಎಂದರೆ ಊಟ ಉಪಚಾರದಲ್ಲಿ ಜಾತಿಭೇದವಿಲ್ಲದಿರುವುದು. ಬೇಟಿ ವ್ಯವಹಾರ ಎಂದರೆ ವಿವಾಹದಲ್ಲಿ ಜಾತಿಗಳ ಮಧ್ಯೆ ಸಂಬಂಧ ಬೆಳೆಸುವುದು. ಇಂದಿನ ದಿನಗಳಲ್ಲಿ ರೋಟಿ ವ್ಯವಹಾರವಂತೂ ನಡೆಯುತ್ತಿದೆ. ಆದರೆ ಅದು ಬಲವಂತದಿಂದಲೇ

*2ನೇ ಪುಟಕ್ಕೆ*

1ನೇ ಪುಟದಿಂದ

# ಸಾಮಾಜಿಕ ಸಮರಸತೆ: ಕೃತಿರೂಪದಲ್ಲಿ ಬರಲಿ ಉದಾತ್ತ ಚಿಂತನೆ

ನಡೆಯುತ್ತಿದೆಯೇ ಹೊರತು ಆತ್ಮೀಯತೆ, ಆಚರಣೆಯ ದೃಷ್ಟಿಯಿಂದ ನಡೆಯುತ್ತಿಲ್ಲ. ಒಂದೊಂದು ಮನೆಯ ಅಡುಗೆಯ ಕ್ರಮ, ಊಟದ ಕ್ರಮ ಬೇರೆ ಬೇರೆಯಿದ್ದರೂ, 'ನಮ್ಮ', 'ನಿಮ್ಮ' ಎಂಬ ಪದಗಳನ್ನು ಮನಸ್ಸಿನಿಂದಲೇ ಪ್ರಾಮಾಣಿಕವಾಗಿ ದೂರವಿಟ್ಟರೆ ರೋಟಿ ವ್ಯವಹಾರದಲ್ಲಿ ಯಾವುದೇ ಬೇಧವಿಲ್ಲದೆ ಸಮರಸತೆಯನ್ನು ಕಾಣಲು ಸಾಧ್ಯವಾಗುತ್ತದೆ.

- ಬೇಟಿ ವ್ಯವಹಾರವನ್ನು ಅನುಸರಿಸುವುದು ರೋಟಿ ವ್ಯವಹಾರದಷ್ಟು ಸುಲಭದ್ದಲ್ಲ. ಹೆಣ್ಣು ಮಗಳನ್ನು ಒಳ್ಳೆಯ ಕಡೆಗೆ ಕೊಡಬೇಕು, ಅಳಿಯನಾಗುವವನು ಮಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು, ಎರಡೂ ಕುಟುಂಬದವರ ನಿಕಟ ಸಂಬಂಧದ, ಅನುರೂಪತೆಯ ಆಸೆ, ಸಹಮತಿಯ ವಿಚಾರಗಳು ವಿವಾಹದಲ್ಲಿ ಅಂತರ್ಗತವಾಗಿರುವುದರಿಂದ ಅಂತರ್ಜಾತಿ ವಿವಾಹವನ್ನು ಹೇರಲು ಆಗುವುದಿಲ್ಲ. ಕಾನೂನು ರೀತಿಯಿಂದ ಇದನ್ನು ವ್ಯವಸ್ಥೆಗೊಳಿಸುವುದು ಪ್ರಮಾದವೂ ಆಗಿ ಪರಿಣಮಿಸಬಹುದು. ಆದರೆ, ಅಂತರ್ಜಾತಿ ವಿವಾಹಕ್ಕೆ ಸಮಾಜ ಸದಸ್ಯನಾಗಿ ನಮ್ಮ ಸಹಮತಿ ಇದೆಯೇ ಅಥವಾ ಅದಕ್ಕೆ ವಿರುದ್ಧವಾಗಿದ್ದೇವೆಯೇ ಎಂದು ಅವಲೋಕಿಸಿಕೊಳ್ಳಬೇಕು. ಬದಲಾಗುತ್ತಿರುವ ಸಮಾಜದಲ್ಲಿ ಅಂತರ್ಜಾತಿ ವಿವಾಹಗಳು ಈಗಿನ ದಿನಗಳಲ್ಲಿ ಸಾಕಷ್ಟು ನಡೆಯುತ್ತಿವೆ. ಹಾಗೆ ನಡೆಯುವ ವಿವಾಹಗಳನ್ನು ವಿರೋಧಿಸುತ್ತೇವೆಯೋ ಅಥವಾ ನಿಸ್ಸಂದಿಗ್ಧರಾಗಿ ಒಪ್ಪಿಕೊಳ್ಳಲು ತಯಾರಿದ್ದೇವೆಯೇ ಎಂಬುದನ್ನು ಒಮ್ಮೆ ಕೇಳಿಕೊಳ್ಳೋಣ.
- ಹಿಂದೆಯೂ ಭೇದಭಾವವಿತ್ತು. ಇಂದಿಗೂ ಇದೆ. ವ್ಯತ್ಯಾಸವೆಂದರೆ ಹಿಂದೆ ಸಹನೆಯ ಮಟ್ಟ ಹೆಚ್ಚಿತ್ತು. ಇಂದು ಸಹನೆಯ ಕಟ್ಟೆಯೊಡೆದಿದೆ. ಮಂದಿರಗಳಲ್ಲಿ ಎಲ್ಲ ಹಿಂದುಗಳಿಗೂ ಪ್ರವೇಶ, ಯಾವುದೇ ಸಂದರ್ಭದಲ್ಲಿ ತಥಾಕಥಿತ ಕೆಳಜಾತಿಯವರಿಗೆ ಪ್ರವೇಶ, ನೀರಿನ ಬಳಕೆಗೆ ಎಲ್ಲರಿಗೂ ಅವಕಾಶ ಕೊಡುವುದು, ಹಾಗೂ ರುದ್ರಭೂಮಿಗಳಲ್ಲಿ ಎಲ್ಲ ಹಿಂದುಗಳಿಗೂ ಪ್ರವೇಶ ಎಂಬುದರ ಬಗ್ಗೆ ನಾವು ಈಗಾಗಲೇ ಕೆಲಸ ಮಾಡುತ್ತಿದ್ದೇವೆ. ಮನಸ್ಸಿನಿಂದ ಆ ದೃಷ್ಟಿ, ಭಾವ ಹೊರಹೋದಾಗ ಹಾಗೂ ಅದರ ಪ್ರಭಾವ ಸಮಾಜದ ಕೊನೆಯ ಹಂತದವರೆಗೂ ತಲುಪಿದಾಗ ಮಾತ್ರವೇ ಸಮರಸತೆ ಮನೆಮಾಡಲು ಸಾಧ್ಯ.
- ವಾಲ್ಮೀಕಿ ಮಹರ್ಷಿಗಳು ರಾಮಾಯಣವನ್ನು ಬರೆದರು. ವಾಲ್ಮೀಕಿಯ ಜಾತಿಯವರು ಇಲ್ಲದೇ ಇರುವ ಪ್ರದೇಶಗಳಲ್ಲಿಯೂ ವಾಲ್ಮೀಕಿ ಜಯಂತಿಯ ಆಚರಣೆ ನಡೆಯಬೇಕಾಗುತ್ತದೆ. ಹೀಗೆ ನಡೆಯುವ ಜಯಂತಿಗಳನ್ನು ಜಾತೀಯವಾಗಿ ವಿಭಜಿಸುತ್ತಾ ಹೋದಂತೆ ಸಮಾಜ ಇನ್ನಷ್ಟು ದುರ್ಬಲವಾಗುತ್ತದೆ. ಜೊತೆಗೆ ಚರ್ಚೆ, ವಾದವಿವಾದಗಳೂ ನಡೆಯುತ್ತವೆ. ಈ ಚರ್ಚೆಗಳಲ್ಲಿಯೂ ನಾವು ಒಂದು ವರ್ಗವನ್ನು ಛೇಡಿಸುವುದನ್ನು ನೋಡುತ್ತೇವೆ. ಇದು ಸರಿಯಲ್ಲ. ಹಾಗೆ ಛೇಡಿಸುವ ಮನಸ್ಥಿತಿಯೂ ಬದಲಾಗಬೇಕು. ಒಂದು ವೇಳೆ ತಥಾಕಥಿತ ಮೇಲ್ವರ್ಗದವರನ್ನು ಛೇಡಿಸಿದರೂ ಅದರಿಂದ ಕಳೆದುಕೊಳ್ಳುವಂತಹದ್ದೇನೂ ಇಲ್ಲ. ಸಹಜವಾಗಿಯೇ, ದಬ್ಬಾಳಿಕೆಗೆ ಒಳಗಾದವರು ತಮ್ಮ ಅದುಮಿಟ್ಟ ಭಾವನೆಗಳನ್ನು ಅನಿವಾರ್ಯವಾಗಿ ಹೊರಹಾಕುತ್ತಾರೆ. ಇಷ್ಟು ವರ್ಷ ದಬ್ಬಾಳಿಕೆ ಮಾಡಿದವರಿಗೆ ಇಂತಹದ್ದನ್ನು ತಾಳಿಕೊಳ್ಳುವ ಹಾಗೂ ಸ್ವೀಕರಿಸುವ ವಿಶೇಷ ಶಕ್ತಿಯೂ ಇರಬೇಕಾಗುತದೆ. ಕಾರಣ ಇಷ್ಟೇ, ನಮ್ಮನ್ನು ಛೇಡಿಸಿದವರೂ ನಮ್ಮದೇ ಸಮಾಜದವರು. ನಮ್ಮ ಮನೆಯವರಿದ್ದ ಹಾಗೆ. ನಮ್ಮ ಮನೆಗಳಲ್ಲಿಯೂ ಕೆಲವೊಮ್ಮೆ ಹೀಗೆ ಜಗಳಗಳು ನಡೆಯುತವೆ. ಹಾಗಾದಾಗಲೆಲ್ಲ ನಾವು ಮನೆ ಬಿಡುತ್ತೇವೆಯೇ? ಕೋಪಗೊಂಡ ಮನೆಯ ಸದಸ್ಯನನ್ನು ಮನೆಯಿಂದ ಹೊರಹಾಕುತ್ತೇವೆಯೇ? ಇಲ್ಲವಷ್ಟೇ! ಕೋಪ, ಕ್ರೋಧ ಶಮನವಾಗುವವರೆಗೂ ಕಾಯುತ್ತೇವೆ. ಅದೇ ರೀತಿಯಲ್ಲಿಯೇ ನಾವು ಸಹನೆಯನ್ನು ರೂಢಿಸಿಕೊಳ್ಳಬೇಕಾಗುತ್ತದೆ.
- ಡಾ। ಅಂಬೇಡ್ಕರರ ವಿಚಾರಗಳ ಅಧ್ಯಯನ ನಡೆದರೆ ಹೊಸ ಅಂಬೇಡ್ಕರರು ನಿಮಗೆ ಕಾಣಸಿಗುತ್ತಾರೆ. ಅಂಬೇಡ್ಕರರ ಎಲ್ಲಾ ಮಾತುಗಳು, ಭಾಷಣಗಳು, ಕೃತಿಗಳು ಉಪಲಬ್ಧವಿದೆ. ಯಾವ ಕಾಲ, ಸಂದರ್ಭದಲ್ಲಿ ಏನ್ನನ್ನು ಏತಕ್ಕಾಗಿ ಹೇಳಿದ್ದಾರೆಂದು ನಾವು ಸಮಗ್ರವಾಗಿ ಅರ್ಥೈಸಿಕೊಂಡು ಮುನ್ನಡೆದರೆ ಅದೊಂದು ಉತ್ತಮ ಬೆಳವಣಿಗೆಯಾಗುತದೆ. ಸ್ವಾಮಿ ವಿವೇಕಾನಂದರು ಹೇಳಿದ್ದನ್ನೇ ಅಂಬೇಡ್ಕರರು ಹಲವಾರು ಬಾರಿ ಪುನರುಚ್ಚಸಿದ್ದಾರೆ. ಮಹಾಪುರಷರೆಲ್ಲರೂ ಒಂದೇ ತರನಾಗಿ ವಿಚಾರ ನಡೆಸುತ್ತಿದ್ದರು. ಅವರೆಲ್ಲರಿಗೂ ಸಮಾನತೆ, ಸಮರಸತೆ, ಸಾಮಾಜಿಕ ಸ್ವಾಸ್ಥ್ಯದ ಕಳಕಳಿಯಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.
- ಭಾಷಣಗಳಿಂದ ಕೇವಲ ಬೌದ್ಧಿಕ ಆನಂದವನ್ನಷ್ಟೇ ಅನುಭವಿಸದೇ, ಸಮರಸತೆ, ಸಮಾನತೆಯ ಅನುಭೂತಿಯನ್ನು ಎಲ್ಲರಿಗೂ ಹಂಚುವ ಧ್ಯೇಯವನ್ನು ಮನಸ್ಸಿನಲ್ಲಿರಿಸಿಕೊಂಡು ಅದರ ಪ್ರಯೋಜನವನ್ನು ಪಡೆಯೋಣ. ಹಾಗೆಯೇ ನಮ್ಮ ಗೃಹ ವ್ಯವಹಾರದಲ್ಲಿ, ಕೌಟುಂಬಿಕ ವ್ಯವಹಾರದಲ್ಲಿ, ಸಾಮಾಜಿಕ ವ್ಯವಹಾರದಲ್ಲಿ ಒಳ್ಳೆಯ ಪರಿವರ್ತನೆ ತರುವ ದೃಷ್ಟಿಯಿಂದ ಎಲ್ಲರೂ ಕಾರ್ಯಪ್ರವೃತ್ತರಾಗಿ ದುಡಿಯೋಣ.

## ಮತ್ತೆ ಬರಲಿದೆ ಕಂಬಳ



ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಕಂಬಳ, ಜೆಲ್ಲಿಕಟ್ಟು ಮತ್ತಿತರ ಸ್ಪರ್ಧೆಗಳಿಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಗ್ರಾಮೀಣ ಭಾಗದಲ್ಲಿ ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಪಾರಂಪರಿಕ ಆಚರಣೆಗಳಿಗೆ ಸರ್ಕಾರ ಅಡ್ಡಿ ಮಾಡುವುದಿಲ್ಲ ಎಂದು ಕೇಂದ್ರ ಪರಿಸರ ಖಾತೆಯ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ. ತಮಿಳುನಾಡಿನ ಜೆಲ್ಲಿಕಟ್ಟು, ಮಹಾರಾಷ್ಟ್ರದ ಎತ್ತಿನ ಗಾಡಿ ಓಟದ ಸ್ಪರ್ಧೆ, ಕರ್ನಾಟಕದ ಕಂಬಳ ಮೊದಲಾದವುಗಳಿಗೆ ನೂರಾರು ವರ್ಷಗಳ ಸಾಂಸ್ಕೃತಿಕ ಹಿನ್ನೆಲೆಯಿದೆ. ಹೀಗಾಗಿ ಇವುಗಳನ್ನು ನಾವು ಗೌರವಿಸಬೇಕು. ಈ ಉದ್ದೇಶದಿಂದ ಪ್ರಾಣಿಗಳಿಗೆ ಹಿಂಸೆ ನೀಡದೆ ನಡೆಸುವ ಸ್ಪರ್ಧೆಗಳಿಗೆ ಅನುಮತಿ ನೀಡಲಾಗುವುದು. ಇದು 2016ರ ಜನವರಿ 1ರಿಂದಲೇ ಜಾರಿಗೆ ಬರಲಿದೆ ಎಂದು ಅವರು ಹೇಳಿದರು. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಈ ಹಿಂದೆ ಸಾಂಸ್ಕೃತಿಕ ಹಿನ್ನೆಲೆಯಿರುವ ಕಂಬಳ, ಜೆಲ್ಲಿಕಟ್ಟು ಮತ್ತಿತರ ಸ್ಪರ್ಧೆಗಳಿಗೆ ಪ್ರಾಣಿದಯೆಯ ಹೆಸರಿನಲ್ಲಿ ನಿಷೇಧ ಹೇರಿತ್ತು.

# ಬ್ಯಾಟರಿ ಚಾಲಿತ ವಿದ್ಯುತ್ ಬಸ್

ಪರಿಸರ ಮಾಲಿನ್ಯ ತಡೆಗಟ್ಟುವ ಮೊದಲ ಹೆಜ್ಜೆಯಾಗಿ ಪ್ರಧಾನಿ ಮೋದಿ ಸಂಸತ್ ಭವನಕ್ಕೆ ತೆರಳುವ ಸಂಸದರಿಗಾಗಿ ಬ್ಯಾಟರಿ ಚಾಲಿತ ವಿದ್ಯುತ್ ಬಸ್‌ನ್ನು ಗಿಫ್ಟ್ ಕೊಟ್ಟಿದ್ದಾರೆ. ಇದರ ಮುಂದುವರಿಕೆಯಾಗಿ ದೇಶದ 1.5 ಲಕ್ಷ ಡೀಸೆಲ್ ಬಸ್‌ಗಳನ್ನು ವಿದ್ಯುತ್ ಚಾಲಿತ ಬಸ್‌ಗಳಾಗಿ ಪರಿವರ್ತಿಸುವುದು ಕೇಂದ್ರ ಸರ್ಕಾರದ ಮುಂದಿನ ಗುರಿಯಾಗಿದೆ. ಇದಕ್ಕಾಗಿ 2016ರ ವೇಳೆಗೆ ಬೆಂಗಳೂರು, ದೆಹಲಿ, ಮುಂಬೈನಲ್ಲಿ ಸೇರಿದಂತೆ ಆಯ್ದ 10 ರಾಜ್ಯಗಳಲ್ಲಿ ಡೀಸೆಲ್ ಚಾಲಿತ ಬಸ್‌ಗಳನ್ನು ವಿದ್ಯುತ್ ಚಾಲಿತ ಬಸ್‌ಗಳನ್ನಾಗಿ ಮಾರ್ಪಾಡುಗೊಳಿಸುವ ಯೋಜನೆ ರೂಪಿಸಿದೆ.

**ವಿದ್ಯುತ್ ಬಸ್‌ನ ಪ್ರಯೋಜನ**

- ಶಬ್ದ ಮಾಲಿನ್ಯ ಸೊನ್ನೆ
- ವಾಯು ಮಾಲಿನ್ಯ ಸೊನ್ನೆ
- ಪೆಟ್ರೋಲಿಯಂ ಉತ್ಪನ್ನಗಳು ಬೇಡವೇ ಬೇಡ
- ರಿಪೇರಿ ಖರ್ಚು ಇತರ ಬಸ್‌ಗಳಿಗಿಂತ ಮುಕ್ಕಾಲುಭಾಗ ಕಡಿಮೆ
- ಕೆಟ್ಟು ಹೋಗುವ ಸಂದರ್ಭ 2 ವರ್ಷಕ್ಕೊಮ್ಮೆ
- ಒಂದು ಚಾರ್ಜ್‌ಗೆ ಸುಮಾರು 250 ಕಿ.ಮೀ. ಕ್ರಮಿಸುವ ಸಾಮರ್ಥ್ಯ
- ಸೋಲಾರ್‌ನಿಂದ ಬಸ್ ಚಾರ್ಜ್ ಮಾಡುವ ತಂತ್ರಜ್ಞಾನವೂ ಭಾರತದಲ್ಲಿ ಲಭ್ಯವಿದೆ




ವಿದೇಶಗಳಿಂದ ಆಮದು ಮಾಡಿದರೆ ಒಂದು ಬಸ್ಸಿಗೆ 1.75 ಕೋಟಿ ರೂ. ವೆಚ್ಚವಾಗಲಿದೆ. ಆದರೆ ದೇಶೀಯವಾಗಿ ಪರಿವರ್ತಿಸಲ್ಪಟ್ಟ ಈ ಬಸ್‌ಗಳ ವೆಚ್ಚ 60 ಲಕ್ಷ ಮಾತ್ರ. ಈ ಬೆಲೆ ತಂತ್ರಜ್ಞಾನ ಪ್ರಗತಿಯೊಂದಿಗೆ ಇನ್ನೂ ಕಡಿಮೆಯಾಗುವ ಸಾಧ್ಯತೆಯಿದೆ. ಇಸ್ರೋ ವಿಜ್ಞಾನಿಗಳು ಕೇಂದ್ರ ಸಚಿವಾಲಯದ ಸಹಯೋಗದೊಂದಿಗೆ ಪ್ರಸ್ತುತ ಅಭಿವೃದ್ಧಿಪಡಿಸಿರುವ ಬ್ಯಾಟರಿಯ ಬೆಲೆ 5 ಲಕ್ಷ ರೂ. ಆಗಿದ್ದು, ಇದರ ಬೆಲೆ ಆಮದು ಮಾಡಿಕೊಳ್ಳುವ ಬ್ಯಾಟರಿ ಬೆಲೆ(55ಲಕ್ಷ)ಗಿಂತ ಹತ್ತುಪಟ್ಟು ಅಗ್ಗವಾಗಿದೆ. ಇಸ್ರೋ, ಐ.ಐ.ಟಿ. ಖರಗ್ಪುರ್(ಪಶ್ಚಿಮ ಬಂಗಾಲ) ಹಾಗೂ ಐ.ಐ.ಟಿ. ಮದ್ರಾಸ್ ಮುಂತಾದ ಸಂಸ್ಥೆಗಳು ಈಗಾಗಲೆ ವಿದ್ಯುತ್ ಚಾಲಿತ ಬಸ್‌ಗಳಿಗೆ ಬೇಕಾಗುವ ಬ್ಯಾಟರಿ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ತನ್ನನ್ನು ತೊಡಗಿಸಿಕೊಂಡಿವೆ. ಕಬ್ಬು ಹಾಗೂ ಇನ್ನಿತರ ವಸ್ತುಗಳಿಂದ ಜೈವಿಕ ಇಂಧನ ತಯಾರಿಸಲು ರೈತರನ್ನು ಪ್ರೇರೇಪಿಸುವ ಗುರಿಯನ್ನು ಸರ್ಕಾರ ಹೊಂದಿದ್ದು, ಪರಿಸರ ಸ್ನೇಹಿ ಎಥನಾಲ್, ಜೈವಿಕ ಡೀಸೆಲ್ ಮತ್ತು ಸಂಕುಚಿತ ನೈಸರ್ಗಿಕ ಅನಿಲಗಳನ್ನು ಪ್ರೋತ್ಸಾಹಿಸುವಂತಹ ನೀತಿಯನ್ನು ಶೀಘ್ರದಲ್ಲೇ ಘೋಷಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ವಾರ್ಷಿಕ 8 ಲಕ್ಷ ಕೋಟಿಯಿರುವ ಕಚ್ಚಾ ತೈಲ ಆಮದನ್ನು ಕಡಿತಗೊಳಿಸುವ ಮೂಲಕ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಸರ್ಕಾರದ ಉದ್ದೇಶವಾಗಿದೆ.

# ಕೃಷಿ ಸಾಧನೆಯಿಂದ ಮಾದರಿಯಾಗಿರುವ ರೈತ




ಈಶ್ವರಪ್ಪ ಹಂಚಿನಾಳ ಓದಿದ್ದು ಎಸ್‌ಎಸ್‌ಎಲ್‌ಸಿ. 12 ಎಕರೆ ಹೊಲದಲ್ಲಿ ಬೇಸಾಯ ಪ್ರಾರಂಭಿಸಿದ ಇವರು ಇಂದು 71 ಎಕರೆ ಜಮೀನು ಮಾಡಿದ್ದಾರೆ. ನಾನಾ ರೀತಿಯ ಬೇಸಾಯ ಪದ್ಧತಿ, ಬೆಳೆಗಳನ್ನು ಬೆಳೆದು ದೇಶದ ಮೂಲೆ ಮೂಲೆಗಳಿಂದ ಇವರ ಕೃಷಿ ಪದ್ಧತಿ ನೋಡಲು ಜನ ಬರುವಂಥ ಸಾಧನೆ ಮಾಡಿದ್ದಾರೆ.

**ಪುಣ್ಯಕೋಟಿ ವೃಕ್ಷಧಾಮ :** ಮುಂಡರಗಿ ತಾಲೂಕಿನ ನಾಗರಳ್ಳಿಯ ಈಶ್ವರಪ್ಪ ಹಂಚಿನಾಳ ಅವರ ತೋಟಕ್ಕೆ ಪುಣ್ಯಕೋಟಿ ವೃಕ್ಷಧಾಮ ಎಂದು ಹೆಸರಿಡಲಾಗಿದೆ. ಹಂಚಿನಾಳ ಅವರು ಮೊದಲು 12 ಎಕರೆ ಜಮೀನಿನಲ್ಲಿ ರೇಷ್ಮೆ ಕೃಷಿ ಹಾಗೂ ಹೈನುಗಾರಿಕೆ ಮಾಡಿ ಯಶಸ್ವಿಯಾದರು. 1972ರಲ್ಲಿ ಉತ್ತರ ಕರ್ನಾಟಕದಲ್ಲೇ ರೇಷ್ಮೆ ಬೆಳೆ ಬೆಳೆದ ಮೊದಲಿಗರು ಎನ್ನುವ ಬಿರುದು ಇವರಿಗಿದೆ.

ಪ್ರಾರಂಭದಲ್ಲಿ ತಾಳೆ ಬೆಳೆಯಲ್ಲಿ ಯಶಸ್ಸು ಕಂಡ ಇವರು 71 ಎಕರೆ ಜಮೀನಿನಲ್ಲಿ ಮಾವು, ನೇರಳೆ, ಡಾಂಬರನಳ್ಳಿ, ಗೋಡಂಬಿ, ದಾಲ್‌ಚಿನ್ನಿ, ಪೇರಲ, ಚಿಕ್ಕು ಸೇರಿದಂತೆ ಬಗೆ ಬಗೆಯ ಹಣ್ಣು ಬೆಳೆದಿದ್ದಾರೆ. ಜತೆಗೆ ಬೇಸಾಯ ಭೂಮಿಯಲ್ಲಿ ಹತ್ತು ಸಾವಿರಕ್ಕೂ ಅಧಿಕ ತೋಟಗಾರಿಕೆ ಸಸ್ಯಗಳನ್ನು ಬೆಳೆದಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಅಳಸು ಬೆಳೆಯುವುದಿಲ್ಲ ಎನ್ನುವ ಮಾತಿದೆ. ಆದರೆ ಹಂಚಿನಾಳ ಅವರ ತೋಟದಲ್ಲಿ ಅಳಸು ಕೂಡ ಅರಳಿ ನಿಂತಿದೆ. ಹಂಚಿನಾಳ ಅವರು ಪ್ರಾರಂಭದಲ್ಲಿ 1 ರೂ.ಗೆ ಒಂದರಂತೆ ಒಟ್ಟು 4 ಸಾವಿರ ಸಾಗವಾನಿ ಸಸಿಗಳನ್ನು ನೆಟ್ಟಿದ್ದರು. ಆ ಸಸಿಗಳು ಬೆಳೆದು ದೊಡ್ಡ ಮರಗಳಾಗಿವೆ. ಇಂದು ಆ ಮರಗಳು ತಲಾ 50 ಸಾವಿರ ರೂ. ಬೆಲೆಬಾಳುತ್ತವೆ. ಸುಮಾರು 20 ಎಕರೆ ನೀರಾವರಿಗೆ ಅನುಕೂಲವಾಗುವಂತೆ ತೋಟದಲ್ಲಿ ಬೃಹತ್ ಹೊಂಡ ನಿರ್ಮಿಸಲಾಗಿದೆ. ಜತೆಗೆ ಸುಮಾರು 10.5 ಲಕ್ಷ ರೂಪಾಯಿ ವೆಚ್ಚದಲ್ಲಿ ಸೋಲಾರ್ ಸಿಸ್ಟಮ್ ಅಳವಡಿಸಿದ್ದು, ಇದರಿಂದ ಸತತ 9 ಗಂಟೆಗಳ ಕಾಲ ವಿದ್ಯುತ್ ಲಭ್ಯವಿದೆ.

**ಜೀವಾಮೃತವೇ ಆಧಾರ :** 20ಕ್ಕೂ ಹೆಚ್ಚು ಹಸುಗಳನ್ನು ಸಾಕಿರುವ ಹಂಚಿನಾಳ, ಸಗಣಿಯನ್ನೇ ಗೊಬ್ಬರವಾಗಿ ಹೊಲಗಳಿಗೆ ಬಳಸುತ್ತಾರೆ. ಸಗಣಿ, ಗೋಮೂತ್ರ ಜತೆಗೆ ಬೆಲ್ಲ ಹಾಗೂ ದ್ವಿದಳ ಧಾನ್ಯದ ಹಿಟ್ಟನ್ನು ಬೆರಕೆ ಮಾಡುವುದರಿಂದ ಅದರಲ್ಲಿನ ಬ್ಯಾಕ್ಟೀರಿಯಾ ದ್ವಿಗುಣಗೊಂಡು ಜೀವಾಮೃತ ಗೊಬ್ಬರ ತಯಾರಾಗುತ್ತದೆ. ಈ ಜೀವಾಮೃತವೇ ಬೆಳೆಗಳಿಗೆ ಆಧಾರ. ಅವರು ಬೆಳೆಗಳಿಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಳಸದಿರುವುದು ಮತ್ತೊಂದು ವಿಶೇಷ.

ಒಡಿಶಾ, ಅಥಣಿ, ರಾಯಭಾಗ, ಆಂಧ್ರಪ್ರದೇಶ, ತಮಿಳುನಾಡು ಸೇರಿದಂತೆ ಇತರ ರಾಜ್ಯಗಳಿಂದ ರೈತರು ಹಾಗೂ ಕೃಷಿತಜ್ಞರು ಈಶ್ವರಪ್ಪ ಹಂಚಿನಾಳ ಅವರ ತೋಟಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿರುವುದು ಅವರ ಸಾಧನೆಗೆ ಹಿಡಿದ ಕನ್ನಡಿಯಾಗಿದೆ.

**ಸಂದ ಪುರಸ್ಕಾರ :** 2007ರಲ್ಲಿ ಅಧಿಕ ಇಳುವರಿ ತಾಳೆ ಮರಗಳ ತೋಟಗಾರಿಕೆ ಸಾಧನೆಗೆ ಮುಖ್ಯಮಂತ್ರಿ ಪ್ರಶಸ್ತಿ, 2007ರಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ ಶ್ರೇಷ್ಠ ಕೃಷಿಕ ಪ್ರಶಸ್ತಿ, 2008ರಲ್ಲಿ ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಕೃಷಿ ಪಂಡಿತ ಪ್ರಶಸ್ತಿ, ಗದಗ ಜಿಲ್ಲಾ ಸಾಹಿತ್ಯ ಪರಿಷತ್ತಿನಿಂದ ಶ್ರೇಷ್ಠ ಸಾಧಕ ಪ್ರಶಸ್ತಿ, ಹೀಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಈಶ್ವರಪ್ಪ ಹಂಚಿನಾಳ ಅವರನ್ನು ಹುಡುಕಿಕೊಂಡು ಬಂದಿವೆ. ಸಂಪರ್ಕ: 94486 29607

ಸಂಪಾದಕೀಯ ಸಹಕಾರ ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ.ಎಂ, ಶ್ರೀಪಾದ ಹೆಚ್.ಎಸ್, ಪ್ರತಾಪ ಕೊಡಂಚ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



ದಿಲೀಪ್ ಸಿಂಗ್ ಮಾಲವೀಯ (87 ವರ್ಷ ವಯಸ್ಸು) ಎಂಬುವವರು ಮಧ್ಯ ಪ್ರದೇಶ ರಾಜ್ಯದ ಭೋಜ್ಪುರಾ ಜಿಲ್ಲೆಯಲ್ಲಿ ನೆಲೆಸಿರುವ ಮನೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಮೇಸ್ತ್ರಿ. ಇವರು ತಮ್ಮ ಹಳ್ಳಿಯ 100 ಮನೆಗಳಿಗೆ ಉಚಿತವಾಗಿ ಶೌಚಾಲಯಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ತಮ್ಮ ಹಳ್ಳಿ ಬರುವ ಮೊಹನ್‌ಪುರ್ ಲಾಂಡಿ ಗ್ರಾಮಪಂಚಾಯತ್‌ನಲ್ಲಿರುವ 4 ಹಳ್ಳಿಗಳಲ್ಲಿ ಒಟ್ಟು 250ಕ್ಕೂ ಅಧಿಕ ಶೌಚಾಲಯಗಳನ್ನು ದಿಲೀಪ್ ಸಿಂಗ್ ಕಟ್ಟಿಸಿಕೊಟ್ಟಿದ್ದಾರೆ. ಹಳ್ಳಿಯ ಸರಪಂಚರೂ ಸೇರಿದಂತೆ ಮಹಿಳೆಯರು, ಮಕ್ಕಳು ಶೌಚಾಲಯಕ್ಕಾಗಿ ಬಯಲು ಪ್ರದೇಶದ ಮೊರೆ ಹೋಗಬೇಕಿತ್ತು. ತನ್ನ ಮಡದಿಯ ಸತತ ಮನವಿಗಳನ್ನು ದಿಲೀಪ್ ತಿರಸ್ಕರಿಸಿದ್ದರಾದರೂ ನಂತರ ತಮ್ಮ ತಪ್ಪಿನ ಅರಿವಾಗಿ ಹಣದ ವ್ಯವಸ್ಥೆ ಮಾಡಿಕೊಂಡು ಮನೆಗೊಂದು ಶೌಚಾಲಯ ನಿರ್ಮಿಸಿದರು. ತದನಂತರ ಊರಿನ ಪ್ರಮುಖರೆಲ್ಲರ ಜೊತೆಗೆ ಮಾತನಾಡಿ, ಊರಿನವರು ಕಲ್ಲು ಮರಳು, ಸಿಮೆಂಟ್‌ನ ಖರ್ಚನ್ನು ಭರಿಸುವುದಾದರೆ ಎಲ್ಲರಿಗೂ ಅನುವಾಗುವಂತೆ ಉಚಿತವಾಗಿ ಶೌಚಾಲಯ ಕಟ್ಟಿಸಿಕೊಡುವುದಾಗಿ ನುಡಿದಿದ್ದ ದಿಲೀಪ್ ತಮ್ಮ ಮಾತಿಗೆ ಬದ್ಧರಾಗಿ ದೇಶಕ್ಕೆ ಮಾದರಿಯಾಗಿದ್ದಾರೆ.

**ಕೃಷಿಯತ್ತ ಯುವಕರು ಆಕರ್ಷಿತರಾಗುತ್ತಿರುವುದನ್ನು ಕೇಳುತ್ತಿದ್ದೇವೆ. ಅದೇ ರೀತಿ ಮೂವತ್ತು ವರ್ಷದ ಕೃಷ್ಣಮೂರ್ತಿ ಎಂಬುವವರು ವಿಪ್ರೊ ಎಂಬ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ತಂತ್ರಜ್ಞರಾಗಿ ಕೆಲಸಮಾಡುತ್ತಿದ್ದರು. ಅವರ ಸ್ವಂತ ಊರಾದ ತಮಿಳುನಾಡಿನ ಕರೂರು ಜಿಲ್ಲೆಯ ಅರುವಣಕುರಿಚಿ ಹಳ್ಳಿಯು ಜೇನುನೊಣಗಳಿಗೆ ಹೂವಿನ ಮಕರಂದ ಸಿಗುವ ಪ್ರಶಸ್ತವಾದ ಜಾಗವಾಗಿತ್ತು. ಅದೊಂದು ದಿನ ತಮ್ಮ ಕೆಲಸವನ್ನು ತೊರೆದು, ಸ್ನೇಹಿತರ ಧನ ಸಹಾಯದಿಂದ ಅರುವಣಕುರಿಚಿಯಲ್ಲಿ ಜೇನು ಸಾಕಾಣಿಕೆಯನ್ನು ಪ್ರಾರಂಭಿಸಿದರು. ಅವರು ಪ್ರಸ್ತುತ ಜೇನುಸಾಕಣೆಯ ಪರಿಚಯ ಮಾಡಿಕೊಂಡು ಅದನ್ನು ಶಿಸ್ತುಬದ್ಧವಾಗಿ ಕಲಿತು ಅವುಗಳು ಪ್ರತ್ಯೇಕ ಹೂವಿನ ಮಕರಂದವನ್ನು ಹೀರಿ ತಯಾರಿಸುವ ಮಧುವನ್ನು ವ್ಯಾಪಾರ ಮಾಡುತ್ತಿದ್ದಾರೆ. ಉದಾಹರಣೆಗೆ ನೇರಳೆ, ಮಾವು, ಕರಿಬೇವು, ಸೂರ್ಯಕಾಂತಿ ಹೀಗೆ ಹಲವು ಹೂಗಳ ಮಕರಂದದಿಂದ ಔಷಧೀಯ ಮೌಲ್ಯವೂ ಹೆಚ್ಚು ಎಂದು ಈಗಾಗಲೆ ಇಸ್ರೇಲ್ ನಿರೂಪಿಸಿದೆ. ಕೃಷ್ಣಮೂರ್ತಿ ಹನಿಕಾರ್ಟ್ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ ಹಾಗೂ ಪ್ರತಿ ತಿಂಗಳು ಸುಮಾರು 50 ಕೆಜಿ ಮಧುವನ್ನು ವ್ಯಾಪಾರ ಮಾಡುತ್ತಿದ್ದಾರೆ.**



ಜುಲೈ 2007ರಲ್ಲಿ ಜಮ್ಮು–ಕಾಶ್ಮೀರದ ಉರಿ ಎಂಬಲ್ಲಿ ನಡೆದ ಉಗ್ರರ ದಾಳಿಯಿಂದ ಕರ್ನಲ್ ವಸಂತ್ ಎಂಬ ಯೋಧ ಬಲಿಯಾದರು. ವಸಂತನನ್ನೇ ನಂಬಿದ್ದ ಕುಟುಂಬಕ್ಕೆ ಸಹಾಯಕತೆಯ ಪರಿಸ್ಥಿತಿ. ಎರಡು ಹೆಣ್ಣು ಮಕ್ಕಳ ಓದು ಕುಂಠಿತವಾಗುವ ಪರಿಸ್ಥಿತಿ ಎದುರಾಗದಂತೆ ನೋಡಿಕೊಳ್ಳಲು ನಿರ್ಧರಿಸಿದ ವಸಂತರ ಧರ್ಮಪತ್ನಿ ಸುಭಾಷಿಣೀ, ಯೋಧನ ಪತ್ನಿಯಾದಂದಿನಿಂದ ಬಿಚ್ಚಿಟ್ಟಿದ್ದ ಭರತನಾಟ್ಯ ಗೆಜ್ಜೆಯನ್ನು ಮತ್ತೆ ಕಟ್ಟಿಕೊಂಡರು. ಮಾತ್ರವಲ್ಲದೇ ಯೋಧರ ಕಥೆಯನ್ನೇ ಬರೆದು ಭರತನಾಟ್ಯ ಆಡಿದರು. ಕುಟುಂಬಕ್ಕೆ ಆಧಾರವಾದರು. ಇದೀಗ ತಮ್ಮ ಭರತನಾಟ್ಯದಿಂದ ಬರುವ ಲಾಭವನ್ನು ಮೃತ ಯೋಧರ ಕುಟುಂಬಗಳ ಸಹಾಯಕ್ಕಾಗಿ ಬಳಸುವ ಸುಭಾಷಿಣಿಯವರು ತಾವು ಕಟ್ಟಿದ 'ವಸಂತರತ್ನ ಫೌಂಢೇಷನ್ ಆಫ್' ಸಂಸ್ಥೆಯ ಮೂಲಕ ಹಲವಾರು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಆಪ್ತ ಸಲಹೆ, ಓದುವ ಮಕ್ಕಳಿಗೆ ವಿದ್ಯಾರ್ಥಿ ವೇತನ, ಸ್ತ್ರೀ ಸಬಲೀಕರಣ ಹೀಗೆ ಹಲವು ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

**ನಕ್ಸಲಿಯರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಸುವ ಛತ್ತೀಸ್‌ಗಢ ಸರ್ಕಾರ ಕ್ರಮದಿಂದಾಗಿ ಕೊಂಡಗಾಂವ್ ಜಿಲ್ಲೆಯಲ್ಲಿನ 11 ಮಂದಿ ನಕ್ಸಲಿಯರು ಶರಣಾಗಿದ್ದಾರೆ. ಛತ್ತೀಸ್‌ಗಢ ಸರ್ಕಾರದ ಶರಣಾಗತಿ ನೀತಿಯಿಂದ ಪ್ರಭಾವಿತಗೊಂಡು ಮತ್ತು ಸಂಘಟನೆಯ ಹಿರಿಯರು ತಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿರುವುದಕ್ಕೆ ಭ್ರಮನಿರಸನಗೊಂಡು ಅವರು ಶರಣಾಗತರಾಗಿದ್ದಾರೆ ಎಂದು ಛತ್ತೀಸ್‌ಗಢದ ಪೊಲೀಸರು ತಿಳಿಸಿದ್ದಾರೆ.**



**ಶರಣಾಗತರಾಗಿರುವವರ ಪೈಕಿ ಗಣೇಶ ಕೊರ್ರಂ (23 ವರ್ಷ) ಮತ್ತು ಲಲಿತ್ ಕಶ್ಯಪ್ (22 ವರ್ಷ) ಪ್ರಮುಖರಾಗಿದ್ದು, ಇವರ ತಲೆಗಳಿಗೆ ಸರ್ಕಾರ ತಲಾ 3 ಲಕ್ಷ ರೂಪಾಯಿಗಳ ಬಹುಮಾನ ಘೋಷಣೆ ಮಾಡಿತ್ತು. ಈ ಇಬ್ಬರು ನಾಯಕರು ಬಸ್ತಾರ್ ಪ್ರದೇಶದಲ್ಲಿ ಮಾವೋವಾದಿ ನಕ್ಸಲಿಯರ ಸಂದೇಶವಾಹಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.**




ಹತ್ತು ಲಕ್ಷ ರೂಪಾಯಿಗಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವ ಗ್ರಾಹಕರು ಕೇಂದ್ರ ಸರ್ಕಾರದಿಂದ ಪಡೆಯುತ್ತಿದ್ದ ಎಲ್‌ಪಿಜಿ ಸಬ್ಸಿಡಿಯನ್ನು ಕಡಿತಗೊಳಿಸುವ ಮಹತ್ವದ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. 2016ರ ಜನವರಿ 1ರಿಂದ ವಾರ್ಷಿಕ 10 ಲಕ್ಷಕ್ಕಿಂತ ಹೆಚ್ಚು ಆದಾಯ ಉಳ್ಳವರು ಮಾರುಕಟ್ಟೆ ದರದಲ್ಲಿಯೇ 14.2 ಕೆ.ಜಿ. ಗೃಹಬಳಕೆ ಅಡುಗೆ ಅನಿಲದ ಸಿಲಿಂಡರ್ ಖರೀದಿಸಬೇಕಾಗುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಹೆಚ್ಚಳ, ವಿತ್ತೀಯ ಕೊರತೆ ಮತ್ತು ಚಾಲ್ತಿ ಖಾತೆ ಕೊರತೆ ನಿಯಂತ್ರಿಸಲು ಹಾಗೂ ಅರ್ಹ ಫಲಾನುಭವಿಗಳಿಗೆ ಸಬ್ಸಿಡಿ ಸೌಲಭ್ಯ ದೊರೆಯುವಂತಾಗಬೇಕು ಎಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿರುವುದಾಗಿ ತೈಲ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.


## ಸಾಲುದ್ದದ ಸುದ್ದಿಗಳು



**ಭಾರತೀಯ ಮೂಲದ ಕ್ಯಾನ್ಸರ್ ಸಂಶೋಧನೆ ತಜ್ಞ ಹರ್‌ಪಾಲ್ ಸಿಂಗ್ ಕುಮಾರ್ ಅವರಿಗೆ ಇಂಗ್ಲೆಂಡಿನ ಎರಡನೇ ಎಲಿಜಬೆತ್ ರಾಣಿ ಅವರು ಪ್ರತಿಷ್ಠಿತ ನೈಟ್‌ಹುಡ್ ಪದವಿ ನೀಡಿ ಗೌರವಿಸಿದ್ದಾರೆ. ಕ್ಯಾನ್ಸರ್ ರೋಗದ ತಡೆಗಟ್ಟುವಿಕೆ, ಪ್ರಾರಂಭದ ಹಂತದಲ್ಲಿಯೇ ಪತ್ತೆಹಚ್ಚುವಿಕೆ ಮತ್ತು ಅದಕ್ಕೆ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡುವಲ್ಲಿ ನಡೆಸಿರುವ ಪರಿಣಾಮಕಾರಿ ಸಂಶೋಧನೆಯನ್ನು ಪರಿಗಣಿಸಿ ಹರ್‌ಪಾಲ್ ಸಿಂಗ್ ಕುಮಾರ್ ಅವರಿಗೆ ಈ ಪದವಿಯನ್ನು ನೀಡಿ ಗೌರವಿಸಲಾಗಿದೆ. ಇಂಗ್ಲೆಂಡಿನ ಕ್ಯಾನ್ಸರ್ ಸಂಶೋಧನೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವ ಹರ್‌ಪಾಲ್ ಸಿಂಗ್, ಸ್ವತಂತ್ರ ಕ್ಯಾನ್ಸರ್ ಕಾರ್ಯಪಡೆಯ ಅಧ್ಯಕ್ಷರೂ ಎನ್‌ಎಚ್‌ಎಸ್ ಕ್ಯಾನ್ಸರ್ ಸ್ಟ್ರಾಟೆಜಿಯ ರೂಪಕರೂ ಆಗಿದ್ದಾರೆ. ಅವರು 2015–20ರ ಅವಧಿಗೆ ಇಂಗ್ಲೆಂಡ್‌ನ ಕ್ಯಾನ್ಸರ್ ನಿಯಂತ್ರಣ ಕಾರ್ಯತಂತ್ರ ಕುರಿತಾಗಿ ಬರೆದಿದ್ದ ಪ್ರಬಂಧ ಈ ವರ್ಷ ಜುಲೈನಲ್ಲಿ ಪ್ರಕಟಗೊಂಡು ವ್ಯಾಪಕ ಪ್ರಶಂಸೆ ಪಡೆದುಕೊಂಡಿತ್ತು.**



ಎಳೆಯ ಮಕ್ಕಳಿಂದ ಹಿಡಿದು ವಯೋವೃದ್ಧರಿಗೂ ಫಾಸ್ಟ್ ಫುಡ್‌ಗಳ ಸೇವನೆ ಆರೋಗ್ಯಕ್ಕೆ ಮಾರಕವಾದುದು ಎಂದು ವೈದ್ಯಲೋಕ ಅಭಿಪ್ರಾಯಪಟ್ಟಿದೆ. ಫಾಸ್ಟ್ ಫುಡ್‌ಗಳ ಸೇವನೆಯಿಂದ ಮಕ್ಕಳ ಮೆದುಳಿನ ಕಾರ್ಯಚಟುವಟಿಕೆಯ ವೇಗ ಕಡಿಮೆ ಆಗಬಹುದು, ಇದರಿಂದಾಗಿ ಅವರ ಶೈಕ್ಷಣಿಕ ಪ್ರಗತಿಯಲ್ಲಿ ಕುಂಠಿತವಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಫಾಸ್ಟ್ ಫುಡ್ ಅತಿಯಾಗಿ ಸೇವಿಸುವ ಮಕ್ಕಳ ಮೇಲೆ ಸಂಶೋಧನೆ ಮಾಡಿ ಸಿದ್ಧಪಡಿಸಲಾಗಿರುವ ವರದಿಯೊಂದರಲ್ಲಿ ಈ ವಿಷಯ ದೃಢಪಟ್ಟಿದೆ. ಸಮಯದ ಅಭಾವ, ಬಾಯಿ ಚಪಲ, ಸೋಮಾರಿತನ – ಇಂತಹ ಕಾರಣಕ್ಕೆ ಫಾಸ್ಟ್ ಫುಡ್ ತಿನ್ನುವ ಹವ್ಯಾಸ ಮಾಡಿಕೊಂಡವರು ಹಾಗೂ ಮಕ್ಕಳಿಗೆ ಕೊಡುವ ಮುನ್ನ ಕೊಂಚ ಯೋಚಿಸುವುದು ಉತ್ತಮ.



**77 ವರ್ಷದ ಗುಜರಾತಿ ಲೇಖಕ ರಘುವೀರ್ ಚೌಧರಿ ಸಾಹಿತ್ಯದ ಹೆಸರಾಂತ ಜ್ಞಾನಪೀಠ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರ ಸಮಗ್ರ ಸಾಹಿತ್ಯ ಸೇವೆಗೆ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಗುಜರಾತಿ ಸಾಹಿತ್ಯ ಕ್ಷೇತ್ರದಲ್ಲಿ ಕಾದಂಬರಿಕಾರರಾಗಿ, ಕವಿಯಾಗಿ, ವಿಮರ್ಶಕರಾಗಿ ಪ್ರಸಿದ್ಧರಾಗಿದ್ದ ಅವರು ಗುಜರಾತ್‌ನ ಗಾಂಧೀನಗರದ ಬಾಪುಪುರದವರು. ಇದು 51ನೇ ಜ್ಞಾನಪೀಠ ಪ್ರಶಸ್ತಿಯಾಗಿದ್ದು, ಗುಜರಾತಿ ಸಾಹಿತ್ಯಕ್ಕೆ ಇದು 4ನೇ ಜ್ಞಾನಪೀಠ ಪ್ರಶಸ್ತಿಯಾಗಿದೆ. ರಘುವೀರ್ ಅವರನ್ನು ಖ್ಯಾತ ಬರಹಗಾರ, ವಿದ್ವಾಂಸ ಪ್ರೊ. ನಾಮ್ವರ್ ಸಿಂಗ್ ಅವರ ಅಧ್ಯಕ್ಷತೆಯ ಜ್ಞಾನಪೀಠ ಸಮಿತಿ ಆಯ್ಕೆ ಮಾಡಿದೆ.**



ದೈಹಿಕ ನ್ಯೂನತೆಯ ಹೊರತಾಗಿಯೂ ಅರ್ಜೆಂಟೀನಾದ ಅಕಾಂಗೊ ಪರ್ವತವೇರುವ ಮೂಲಕ ಅರುಣಿಮಾ ಸಿನ್ಹಾ ಮತ್ತೊಮ್ಮೆ ವಿಶ್ವದ ಗಮನ ಸೆಳೆದಿದ್ದಾರೆ. ಎರಡನೇ ಮೌಂಟ್ ಎವರೆಸ್ಟ್ ಎಂದೇ ಪ್ರಸಿದ್ಧಗೊಂಡಿರುವ ಈ ಪರ್ವತವನ್ನು ಎಡಗಾಲಿನ ನ್ಯೂನತೆ ಇರುವ ಅರುಣಿಮಾ ಏರಿ ಹೊಸದೊಂದು ಸಾಧನೆ ಮಾಡಿದ್ದಾರೆ. ಡಿಸೆಂಬರ್ 12 ರಂದು ಪರ್ವತಾರೋಹಣ ಪ್ರಾರಂಭಿಸಿದ ಅವರು ಡಿ. 25 ರಂದು ತುತ್ತತುದಿ ತಲುಪಿ ಭಾರತದ ತ್ರಿವರ್ಣ ಧ್ವಜ ಹಾರಿಸಿದ್ದಾರೆ. ಅಕಾಂಗೊ ಪರ್ವತ ಸಮುದ್ರ ಮಟ್ಟದಿಂದ 6960.8 ಮೀಟರ್ ಎತ್ತರವಿದ್ದು, ಏಷ್ಯೇತರ ಬೆಟ್ಟಗಳಲ್ಲಿಯೇ ಅತಿ ದೊಡ್ಡದೆನಿಸಿದೆ. ಜಗತ್ತಿನ 7 ದೊಡ್ಡ ಪರ್ವತವೇರುವ ಗುರಿ ಹೊಂದಿರುವ ಅರುಣಿಮಾ, ಈಗಾಗಲೇ 4 ಪರ್ವತಗಳನ್ನು ಏರಿದ್ದು, ಇದು 5ನೇಯದ್ದಾಗಿದೆ. ಈ ಮೂಲಕ 5 ಪರ್ವತಗಳನ್ನೇರಿದ ಪ್ರಥಮ ವಿಕಲಾಂಗ ಮಹಿಳೆ (ದಿವ್ಯಾಂಗ ಮಹಿಳೆ) ಎಂಬ ವಿಶ್ವ ದಾಖಲೆಗೆ ಅರುಣಿಮಾ ಪಾತ್ರವಾಗಿದ್ದಾರೆ. ಕತ್ತಿನಲ್ಲಿದ್ದ ಚಿನ್ನದ ಸರ ಅಪಹರಿಸಲು ಬಂದ ಕಳ್ಳರಿಂದ ರೈಲಿನಿಂದ ಹೊರ ನೂಕಲ್ಪಟ್ಟು ಕಾಲನ್ನು ಕಳೆದುಕೊಂಡ ರಾಷ್ಟ್ರೀಯ ವಾಲಿಬಾಲ್‌ನ ಕ್ರೀಡಾಪಟುವಾಗಿದ್ದ ಅರುಣಿಮಾ ಸಾಮಾನ್ಯರಿಗೂ ಸಾಹಸದ ಕಾರ್ಯವಾದ ಪರ್ವತಾರೋಹಣಕ್ಕೆ ಮುಂದಾಗಿ ಯಶಸ್ವಿಯಾಗಿದ್ದಾರೆ. ಜಗತ್ತಿನ ಅತಿ ಎತ್ತರದ ಮೌಂಟ್ ಎವರೆಸ್ಟ್ ಪರ್ವತವನ್ನು ಕೃತಕ ಕಾಲಿನಿಂದಲೇ ಹತ್ತಿ ಅಂಗವಿಕಲರ ಪಾಲಿನ 'ಆಶಾಕಿರಣ'ವಾದಳು. ಆ ಮೂಲಕ ಹೊಸ ಇತಿಹಾಸವನ್ನೇ ಬರೆದಳು. ಅರುಣಿಮಾಗೆ ಭಾರತ ಸರ್ಕಾರ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.

**ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾಗಿ ಪದಗ್ರಹಣ ಮಾಡಿದ (2014 ಮೇ, 26) ಬಳಿಕ ಸುಮಾರು 12,858 ನಿರಾಶ್ರಿತರಿಗೆ ಪ್ರಧಾನಮಂತ್ರಿ ಕಚೇರಿ (ಪಿಎಂಒ) ಸಹಾಯಹಸ್ತ ಚಾಚಿದೆ ಎಂದು ಆರ್‌ಟಿಐ ಮಾಹಿತಿಯಿಂದ ತಿಳಿದುಬಂದಿದೆ. 2014ರ ಮೇ 26 ರಿಂದ 2015ರ ಆಗಸ್ಟ್ 31ರವರೆಗೆ ದೇಶದಾದ್ಯಂತ ಸುಮಾರು 29,678 ಮಂದಿ ಹಣಕಾಸಿನ ನೆರವಿಗಾಗಿ ಪ್ರಧಾನಮಂತ್ರಿ ಕಚೇರಿಗೆ ಅರ್ಜಿ ಹಾಕಿದ್ದು, ಈ ಪೈಕಿ 12,858 ಮಂದಿ ನಿರಾಶ್ರಿತರಿಗೆ ಹಣಕಾಸಿನ ಸಹಾಯ ಮಾಡಿದ್ದಾರೆ. ಇದೇ ವೇಳೆ 4,059 ಅರ್ಜಿಗಳು ತಿರಸ್ಕೃತಗೊಂಡಿದ್ದು, ಇನ್ನುಳಿದ ಅರ್ಜಿಗಳು ಪ್ರಕ್ರಿಯೆಯಲ್ಲಿದೆ ಎಂಬ ಮಾಹಿತಿ ಆರ್‌ಟಿಐನಿಂದ ಬಹಿರಂಗಗೊಂಡಿದೆ. ಪಿಎಂಒ ಮೂಲಗಳ ಪ್ರಕಾರ, 174.9966 ಕೋಟಿ ರೂಪಾಯಿ ಪ್ರಧಾನಿ ರಾಷ್ಟ್ರೀಯ ಪರಿಹಾರ ನಿಧಿ (PMNRF)ಯಿಂದ ಪ್ರಧಾನಿ ಮೋದಿ ಅವರ ನಿರ್ದೇಶನದ ಮೂಲಕ 12,858 ನಿರಾಶ್ರಿತರಿಗೆ ಹಣಕಾಸಿನ ನೆರವು ನೀಡಲಾಗಿದೆ. ಉತ್ತರಪ್ರದೇಶದಿಂದ ಸುಮಾರು 6,178, ಪಶ್ಚಿಮ ಬಂಗಾಳದಿಂದ 4,204, ಮಹಾರಾಷ್ಟ್ರದಿಂದ 3,852, ಕೇರಳದಿಂದ 2,568, ತಮಿಳುನಾಡುನಿಂದ 1,251 ಅರ್ಜಿಗಳು ಬಂದಿವೆ.**

## ವನೌಷಧಗಳ 'ಬನಜಾಲಯ'

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕೊಡ್ಲುತೋಟದ ಬನಜಾಲಯದ ರಮೇಶ, ಪರಿಸರ ಸಂರಕ್ಷಣೆಯನ್ನೇ ತಮ್ಮ ಜೀವನವನ್ನಾಗಿಸಿಕೊಂಡವರು. ಇವರ ಮನೆ 'ಬನಜಾಲಯ' ಅಪರೂಪದ ಪರಿಸರ ಕ್ಷೇತ್ರವಾಗಿದೆ. ಬನಜಾಲಯ ವನೌಷಧ, ಗಿಡಮರಗಳ ಪಳೆಯುಳಿಕೆ, ವೈವಿಧ್ಯಮಯ ಸಸ್ಯ, ಎಲೆ, ಬೀಜಗಳ ಸಂಗ್ರಹದಿಂದ ಪರಿಸರ ಪ್ರೇಮಿಗಳು ಮತ್ತು ಪರಿಸರ ಅಧ್ಯಯನಾಸಕ್ತರಿಗೆ ಆಕರ್ಷಕ ತಾಣವಾಗಿದೆ. ಸುಮಾರು 32 ವರ್ಷಗಳಿಂದ ರಮೇಶ ಹಾಗೂ ಅವರ ಕುಟುಂಬದವರು ಪರಿಸರ ಉಳಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಮನೆಯ ಮುಂಭಾಗದಲ್ಲಿ ಕಾಡಿನ ಜಾತಿಯ ಗಿಡ, ಮರ, ಬಳ್ಳಿಗಳು ತುಂಬಿಕೊಂಡಿವೆ. ಇವರ ಮನೆಯಲ್ಲಿ 900ಕ್ಕೂ ಅಧಿಕ ವಿಭಿನ್ನ ಜಾತಿಯ ಬೀಜಗಳ ಸಂಗ್ರಹವಿದೆ. ಇಂತಹ ಬೀಜಗಳನ್ನು ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಕವರಗಳಲ್ಲಿ ನೇತು ಹಾಕಿ ಇವುಗಳ ಉಪಯೋಗ ಮತ್ತು ಮಹತ್ವದ ಬಗ್ಗೆ ಮಾಹಿತಿ ಪ್ರದರ್ಶಿಸಿದ್ದಾರೆ. ಮನೆಯ ಪಡಸಾಲೆ, ಜಗುಲಿ, ದೇವರ ಕೋಣೆಗಳ ಗೋಡೆ, ಮನೆಯ ಮುಂಭಾಗದ ಕಂಬಗಳು ಎಲ್ಲವೂ ಗಿಡ ಮರಗಳ ಪಳೆಯುಳಿಕೆಗಳು ಮತ್ತು ಸಸ್ಯದ ಎಲೆ ಬೇರು ಇತ್ಯಾದಿಗಳಿಂದ ತಯಾರಿಸಲ್ಪಟ್ಟ ಕರಕುಶಲ ವಸ್ತುಗಳಿಂದ ಅಲಂಕೃತಗೊಂಡಿದೆ. ಮನೆಯ ಉಪ್ಪರಿಗೆಯಲ್ಲಿ ಬಗೆಬಗೆಯ ಬೀಜ, ಬೇರು, ಹಕ್ಕಿಗಳ ಗರಿ, ಹಾವಿನ ಪೊರೆ ಇತ್ಯಾದಿ ವಿಶಿಷ್ಟ ವಸ್ತುಗಳ ಸಂಗ್ರಹಾಲಯವಿದೆ. ಸತತ 30 ವರ್ಷಗಳಿಂದ ಸುತ್ತಲಿನ ಕಾಡಿನಲ್ಲಿ ಸಿಕ್ಕ ಮರಗಿಡ ಬಳ್ಳಿ ಮತ್ತು ಪ್ರಾಣಿ ಪಕ್ಷಿಗಳ ಪಳೆಯುಳಿಕೆ ಸಂಗ್ರಹಿಸಿದ್ದಾರೆ. ಸತ್ತ ಪ್ರಾಣಿ ಪಕ್ಷಿಗಳ ಮೂಳೆ, ಕೊಂಬೆ, ಗರಿ ಇತ್ಯಾದಿ ಸಂಗ್ರಹವಿದೆ. ಇವರ ಮನೆಯ ಸುತ್ತ ಸುಮಾರು 50 ಎಕರೆ ವಿಸ್ತೀರ್ಣದ ಕಾಡು ಇದೆ. ಇಲ್ಲಿ ಒಣಗಿ ಬಿದ್ದವುಗಳನ್ನು ಮಾತ್ರ ಬಳಸುವ ಇವರು ಯಾರೂ ಇವುಗಳನ್ನು ಕಡಿಯದಂತೆ ನೋಡಿಕೊಳ್ಳುತ್ತಿದ್ದಾರೆ. ಸಂಪರ್ಕಕ್ಕೆ 93412 78212



पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-01-2016





# ರಾಜ್ಯಧ್ವಜ : ಜಮ್ಮು–ಕಾಶ್ಮೀರ ಹೈಕೋರ್ಟ್ ತಡೆಯಾಜ್ಞೆ

ಜಮ್ಮು–ಕಾಶ್ಮೀರದಲ್ಲಿ ಸರ್ಕಾರಿ ಕಟ್ಟಡ, ಸರ್ಕಾರಿ ವಾಹನಗಳ ಮೇಲೆ ರಾಷ್ಟ್ರಧ್ವಜ ಹಾಗೂ ರಾಜ್ಯದ ಧ್ವಜವನ್ನು ಹಾಕಬೇಕು ಎಂಬ ಆದೇಶಕ್ಕೆ ಜಮ್ಮು–ಕಾಶ್ಮೀರ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಸಂವಿಧಾನದ 370ನೇ ವಿಧಿ ಪ್ರಕಾರ ರಾಷ್ಟ್ರಧ್ವಜದೊಂದಿಗೆ ರಾಜ್ಯಧ್ವಜವನ್ನೂ ಆರೋಹಿಸುವ ಅಧಿಕಾರ ಭಾರತದಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದೆ. ಹೀಗಾಗಿ ಸಾಂವಿಧಾನಿಕ ಸಂಸ್ಥೆಗಳ ಕಚೇರಿ ಹಾಗೂ ವಾಹನಗಳ ಮೇಲೆ ರಾಷ್ಟ್ರಧ್ವಜದ ಜತೆಗೆ ರಾಜ್ಯ ಧ್ವಜವನ್ನೂ ಹಾರಾಟ ಮಾಡಬೇಕು ಎಂದು ಜಮ್ಮು–ಕಾಶ್ಮೀರ ಸರ್ಕಾರ ಮಾ. 12 ರಂದು ಸುತ್ತೋಲೆ ಹೊರಡಿಸಿತ್ತು. ಆದರೆ ಒಂದೇ ದೇಶದಲ್ಲಿ 2 ಧ್ವಜ ಬೇಡ ಎಂದು ಬಿಜೆಪಿ ನಿಲುವು ತಳೆದಿತ್ತು. ಹೀಗಾಗಿ ಮಾ.12ರ ಸುತ್ತೋಲೆಯನ್ನು ಸರ್ಕಾರ ಮರುದಿನವೇ ಹಿಂಪಡೆದಿತ್ತು. ಇದರ ವಿರುದ್ಧ ಅಬ್ದುಲ್ ಖಯೂಂ ಖಾನ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ತನಿಖೆ ನಡೆಸಿದ ಜಮ್ಮು–ಕಾಶ್ಮೀರ ಹೈಕೋರ್ಟ್ ಡಿ.27 ರಂದು ಸರ್ಕಾರಿ ಕಟ್ಟಡ, ಸರ್ಕಾರಿ ವಾಹನಗಳ ಮೇಲೆ ರಾಷ್ಟ್ರಧ್ವಜ ಹಾಗೂ ರಾಜ್ಯಧ್ವಜವನ್ನು ಹಾರಿಸಬೇಕು ಎಂದು ಆದೇಶ ನೀಡಿತು. ಇದನ್ನು ಪ್ರಶ್ನಿಸಿ ಜಮ್ಮು–ಕಾಶ್ಮೀರ ಸರ್ಕಾರದ ಮಿತ್ರಪಕ್ಷ ಬಿಜೆಪಿ ಜಮ್ಮು–ಕಾಶ್ಮೀರ ಹೈಕೋರ್ಟ್ ಮೆಟ್ಟಿಲೇರಿ ತಡೆಯಾಜ್ಞೆ ತರುವಲ್ಲಿ ಇದೀಗ ಯಶಸ್ವಿಯಾಗಿದೆ.




# ಸಣ್ಣ ಕಂಪ್ಯೂಟರ್ + ದೊಡ್ಡ ದೂರವಾಣಿ = ಸ್ಮಾರ್ಟ್ ಫೋನ್

ಲೇಖಕ: ಶ್ರೀಹರ್ಷ ಪೆರ್ಲ, ಮಾಹಿತಿ ತಂತ್ರಜ್ಞ

ಕೆಲವು ದಶಕಗಳ ಹಿಂದೆ ಒಂದು ಕೊಠಡಿಯ ಗಾತ್ರದಷ್ಟಿರುತ್ತಿದ್ದ ಕಂಪ್ಯೂಟರುಗಳ ಗಾತ್ರ ಕಿರಿದಾಗುತ್ತಾ ಬಂದು ಇದೀಗ ನಮ್ಮ ಜೇಬುಗಳೊಳಗೆ ಕುಳಿತುಕೊಳ್ಳುವ ಮಟ್ಟಕ್ಕೆ ಇಳಿದಿದೆ. ನಮ್ಮ ಕಿಸೆಯೊಳಗಿರಿಸಬಹುದಾದ ಸ್ಮಾರ್ಟ್ ಫೋನ್‌ಗಳು ಇತ್ತೀಚಿನ ಕೆಲ ವರ್ಷಗಳ ಹಿಂದಿನ ಕಂಪ್ಯೂಟರುಗಳಿಗಿಂತಲೂ ಹೆಚ್ಚಿನ ಸಾಮರ್ಥ್ಯ ಹೊಂದಿವೆ ಎಂಬುದು ಹಲವರಿಗೆ ತಿಳಿದಿರಲಿಕ್ಕಿಲ್ಲ. ಮಾಹಿತಿ/ದತ್ತಾಂಶಗಳ ಶೇಖರಣೆ, ಚಿತ್ರ/ಚಲನಚಿತ್ರಗಳ ವೀಕ್ಷಣೆ, ಧ್ವನಿಮುದ್ರಿಕೆಗಳ ಕೇಳುವಿಕೆ, ಲೆಕ್ಕಾಚಾರ, ತಾಂತ್ರಿಕ ಆಟಗಳು, ಅಂತರ್ಜಾಲದೊಂದಿಗೆ ಸಂಪರ್ಕ – ಹೀಗೆ ಹಲವು ರೀತಿಯ ಕಾರ್ಯಗಳು ಕಂಪ್ಯೂಟರುಗಳೂ ಮಾಡುವಂಥದ್ದೇ ಆಗಿವೆ.

ಕಂಪ್ಯೂಟರು ಮತ್ತು ಸ್ಮಾರ್ಟ್ ಫೋನ್‌ಗಳ ಮೂಲವಾಗಿರುವ ಗಣಕೀಯ ಪ್ರಕ್ರಿಯೆ ನಡೆಯುವುದು ಅದರ ಹೃದಯದಂತಿರುವ ಪ್ರೊಸೆಸ್‌ಗಳಲ್ಲಿ. ಮಾಹಿತಿಗಳನ್ನು ನೆನಪಿರಿಸಲು ಮತ್ತು ಸಂಗ್ರಹಿಸಿಡಲು ರ‍್ಯಾಮ್ ಮತ್ತು ರೋಮ್ ಎಂಬ ಎರಡು ರೀತಿಯ ಭಾಗಗಳನ್ನು ಬಳಸಲಾಗುತ್ತದೆ. ಕಂಪ್ಯೂಟರುಗಳು ದೊಡ್ಡ ಗಾತ್ರದ ಕಾಂತೀಯ ಶೇಖರಣಾ ಸಾಧನಗಳನ್ನು ಬಳಸಿದರೆ, ಮೊಬೈಲುಗಳಲ್ಲಿ ಉಗುರಿನ ಗಾತ್ರದ 'ಚಿಪ್'ಗಳನ್ನು ಬಳಸುತ್ತವೆ. ಇವುಗಳ ಸಾಮರ್ಥ್ಯ ಹೆಚ್ಚಿದ್ದಷ್ಟೂ ಹೆಚ್ಚು ಸಂಗ್ರಹ ಮಾಡುವ ಅವಕಾಶವಿದೆ ಎಂದು ಅರ್ಥ. ಇದನ್ನು ಅಳೆಯಲು ಎಂಬಿ/ಜಿಬಿಗಳನ್ನು ಬಳಸುತ್ತಾರೆ. ಒಂದು ಎಂಬಿ ಎಂದರೆ ಒಂದು ಚಿತ್ರವನ್ನು ಸಂಗ್ರಹಿಸಿಡಲು ಸಾಕು. 1000 ಎಂಬಿಯನ್ನು ಒಂದು ಜಿಬಿ ಎನ್ನುತ್ತೇವೆ. ಇದು ಒಂದು ಚಲನಚಿತ್ರವನ್ನು ಶೇಖರಿಸಲು ಸಾಕಾಗುತ್ತದೆ. 8ಜಿಬಿ/16ಜಿಬಿ ಸಾಮರ್ಥ್ಯ ಇತ್ತೀಚಿನ ಸ್ಮಾರ್ಟ್ ಫೋನ್‌ಗಳಲ್ಲಿ ಸಾಮಾನ್ಯವಾಗಿದ್ದು ಇನ್ನೊಂದು ನೆನಪು ಚಿಪ್ಪ(ಮೆಮೊರಿ ಕಾರ್ಡ್)ನ್ನು ಲಗತ್ತಿಸಿ ಅದನ್ನು ಹೆಚ್ಚಿಸುವ ಅವಕಾಶವಿರುತ್ತದೆ.

ಹಾಗೆ ನೋಡಿದರೆ ಬಹುತೇಕ ಕಂಪ್ಯೂಟರುಗಳಲ್ಲಿಲ್ಲದ ಒಂದಷ್ಟು ಭಾಗಗಳು ಸ್ಮಾರ್ಟ್ ಫೋನಿನಲ್ಲಿ ಸಾಮಾನ್ಯವಾಗಿವೆ. ನಮ್ಮ ಇಂದ್ರಿಯಗಳು ಮಾಡುವಂತಹ ಕೆಲಸಗಳನ್ನು ಮಾಡುವ ಮೊಬೈಲ್ ಭಾಗಗಳನ್ನು ಸೆನ್ಸರ್‌ಗಳು ಎನ್ನುತ್ತೇವೆ. ಬೆಳಕು, ದಿಕ್ಕು, ಗುರುತ್ವ, ಪಕ್ಕದಲ್ಲಿರುವ ವಸ್ತುವಿನ ದೂರ, ಚಲನೆ ಇತ್ಯಾದಿಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ ಫೋನ್‌ಗಳಿಗೆ ಬರುವುದು ಇದರಿಂದಾಗಿ.

**ಮೊಬೈಲ್‌ಗಳ ಬಗ್ಗೆ ಇನ್ನಷ್ಟು ತಿಳಿಯುವುದರ ಜೊತೆಗೆ ಅವುಗಳ ಬಳಕೆಯನ್ನು ಕಲಿಯುವ ಕೆಲಸವನ್ನು ಮುಂದಿನ ಸಂಚಿಕೆಗಳಲ್ಲಿ ಮಾಡೋಣ.**

# ನಮ್ಮ ಮನೆಗೂ ಬರಲಿ L.E.D. ಬಲ್ಬುಗಳು

ವಿದ್ಯುತ್‌ನ ಅಭಾವವನ್ನು ಹೋಗಲಾಡಿಸುವ ದೃಷ್ಟಿಯಿಂದ ದೇಶದೆಲ್ಲೆಡೆ L.E.D.(ಎಲ್.ಈ.ಡಿ– light-emitting diode - L.E.D.) ಬಲ್ಬುಗಳನ್ನೇ ಬಳಸುವಂತೆ ಜನರನ್ನು ಪ್ರೇರೇಪಿಸುವ, ವಿದ್ಯುತ್ ಉಳಿತಾಯದ ಬಗ್ಗೆ ಅರಿವು ಮೂಡಿಸುವ ಕೆಲಸಗಳು ಸಾಕಷ್ಟು ನಡೆಯುತ್ತಿವೆ. ಕೇಂದ್ರ ಸರ್ಕಾರ ಮಾರ್ಚ್ 2016ರ ಒಳಗಾಗಿ 100 ನಗರಗಳಲ್ಲಿ ಬೀದಿದೀಪಗಳು ಸೇರಿದಂತೆ ಎಲ್ಲಾ ಲೈಟ್‌ಗಳನ್ನು L.E.D.ಗೆ ಬದಲಿಸುವ ಗುರಿ ಹೊಂದಿದೆ. ಹಾಗಿದ್ದರೆ ಎಲ್.ಈ.ಡಿ ಬಳಕೆಯಿಂದ ಲಾಭವೇನು ಮತ್ತು Compact Fluorescent Lamp (CFL) ಹಾಗೂ ಇನಕ್ಯಾಂಡಿಸಿಂಟ್ ಬಲ್ಬು (Incandescent Bulbs) ಗಳಿಗಿಂತ ಇದು ಹೇಗೆ ಭಿನ್ನ? ಈ ಎಲ್ಲಾ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ,

| |  |  |  |
|---|---|---|---|
| | LED Light-emitting Diode | Incandescent ಇನಕ್ಯಾಂಡಿಸಿಂಟ್ | ಸಿ.ಎಫ್.ಎಲ್ CFL |
| ಸರಾಸರಿ ಆಯಸ್ಸು | 50,000 ಗಂಟೆಗಳು | 1,200 ಗಂಟೆಗಳು | 8,000 ಗಂಟೆಗಳು |
| ವಿದ್ಯುತ್ ಬಳಕೆ (800 ಲ್ಯುಮೆನ್ಸ್ ಬೆಳಕು ಅಥವಾ 60 ವ್ಯಾಟ್ ಬಲ್ಬಿಗೆ ಸಮ) | 6–8 ವ್ಯಾಟ್ | 60 ವ್ಯಾಟ್ | 13–15 ವ್ಯಾಟ್ |
| ವಾರ್ಷಿಕ ವಿದ್ಯುತ್ ವೆಚ್ಚ (ದಿನಕ್ಕೆ 5 ಗಂಟೆಗಳಂತೆ, 5 ಬಲ್ಬುಗಳಿಗೆ, ಯುನಿಟ್‌ಗೆ 2.7 ರೂಪಾಯಿ ಯಂತೆ) | 172 ರೂಪಾಯಿ | 1478 ರೂಪಾಯಿ | 345 ರೂಪಾಯಿ |
| ವಿಷಕಾರಿ ಪಾದರಸವನ್ನು ಹೊಂದಿರುತ್ತದೆ | ಇಲ್ಲ | ಇಲ್ಲ | ಹೊಂದಿರುತ್ತದೆ |
| ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆ (ಪ್ರತಿ ಬಲ್ಬಿಗೆ) | 6 ಕಿಲೋ ಗ್ರಾಂ (ವರ್ಷಕ್ಕೆ) | 56 ಕಿಲೋ ಗ್ರಾಂ (ವರ್ಷಕ್ಕೆ) | 13 ಕಿಲೋ ಗ್ರಾಂ (ವರ್ಷಕ್ಕೆ) |
| ಪದೇ–ಪದೇ ದೀಪವನ್ನು ಹಚ್ಚುವುದು ಹಾಗೂ ಆರಿಸುವುದರ ಪರಿಣಾಮ | ಯಾವುದೇ ಪರಿಣಾಮ ಇಲ್ಲ | ಕೆಲವೊಮ್ಮೆ ಮಾತ್ರ | ಬಲ್ಬಿನ ಜೀವಿತಾವಧಿಯ ಮೇಲೆ ಬಹಳವಾಗಿ ಪರಿಣಾಮ ಬೀರುತ್ತದೆ |





**ಪುಣೆಯ ಹಿಂಜೇವಾಡದ 450ಎಕರೆ ವಿಸ್ತಾರದ ಮೈದಾನದಲ್ಲಿ ನಡೆದ "ಶಿವಶಕ್ತಿ ಸಂಗಮ" ಕಾರ್ಯಕ್ರಮದಲ್ಲಿ ಪುಣೆ, ನಾಶಿಕ್, ಸಾಂಗ್ಲಿ, ಸೋಲಾಪುರದಿಂದ ಒಟ್ಟು 1,58,772 ಮಂದಿ ಕಾರ್ಯಕರ್ತರು ಪೂರ್ಣ ಗಣವೇಶದಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು.**

# ಚೆನ್ನೈ ಸಂತ್ರಸ್ತರಿಗೆ : ಆರೆಸ್ಸೆಸ್ ನೆರವು




ಡಿಸೆಂಬರ್ ಪ್ರಾರಂಭದಲ್ಲಿ ಚೆನ್ನೈ ಸೇರಿದಂತೆ ತಮಿಳುನಾಡಿನ ಕೆಲ ಪ್ರದೇಶಗಳಲ್ಲುಂಟಾದ ಪ್ರವಾಹ ಸಂತ್ರಸ್ತರಿಗೆ ನೆರವು ನೀಡುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್)ದ ಕರ್ನಾಟಕ ಘಟಕವು ಆರೆಸ್ಸೆಸ್ ಸಂಚಾಲಿತ ಸಂತ್ರಸ್ತ ಪರಿಹಾರ ನಿಧಿ' ಅಡಿಯಲ್ಲಿ 10 ಲಕ್ಷ ರೂಪಾಯಿ ದೇಣಿಗೆ ಸಂಗ್ರಹಿಸಿದೆ. ಪರಿಹಾರ ಚಟುವಟಿಕೆಗಳಲ್ಲಿ ಈಗಾಗಲೇ ತನ್ನನ್ನು ತೊಡಗಿಸಿಕೊಂಡಿರುವ ಆರೆಸ್ಸೆಸ್‌ನ ಅಂಗಸಂಸ್ಥೆಯಾದ 'ಸೇವಾ ಭಾರತಿ'ಯ ತಮಿಳುನಾಡು ಘಟಕಕ್ಕೆ ಈ ದೇಣಿಗೆಯನ್ನು ಇತ್ತೀಚೆಗೆ ಹಸ್ತಾಂತರಿಸಿದೆ.

ಕುಂಭದ್ರೋಣ ಮಳೆಯಿಂದುಂಟಾದ ಪ್ರವಾಹಕ್ಕೆ ನೆರೆಯ ತಮಿಳುನಾಡಿನ ಚೆನ್ನೈ ನಗರ ಸೇರಿದಂತೆ ಸುತ್ತುಮುತ್ತಲ ಕಾಂಚಿಪುರಂ, ತಿರುವಳ್ಳೂರ್ ಮತ್ತು ಕಡಲೂರ್ ಜಿಲ್ಲೆಗಳು ನಲುಗಿ ಹೋಗಿದೆ. ಸಾಂಸ್ಕೃತಿಕ ಶ್ರೀಮಂತಿಕೆಯ ಈ ನಾಡಿನಲ್ಲಿ ಪ್ರಾಚೀನ ಸ್ಮಾರಕಗಳು, ದೇಗುಲಗಳು ಸೇರಿದಂತೆ ರಸ್ತೆ–ಶಾಲೆ–ಆಸ್ಪತ್ರೆ–ಅಂಗಡಿಗಳು ಜಲಾವೃತಗೊಂಡಿದೆ. ನೂರಾರು ಮಂದಿ ಮೃತಪಟ್ಟಿದ್ದು, ಲಕ್ಷಾಂತರ ಜನರು ಈ ಪ್ರಾಕೃತಿಕ ವಿಕೋಪದಿಂದ ಸಂತ್ರಸ್ತರಾಗಿದ್ದಾರೆ. ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿ–ಪಾಸ್ತಿ ನಷ್ಟವಾಗಿದೆ. ಆರೆಸ್ಸೆಸ್ ಸ್ವಯಂಸೇವಕರು ಘಟನೆ ನಡೆದ ತತ್‌ಕ್ಷಣವೇ ಪರಿಹಾರ ಕಾರ್ಯಾಚರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸೇವಾಭಾರತಿ ಅಲ್ಲಲ್ಲಿ ಸಹಾಯಕೇಂದ್ರಗಳನ್ನು ಆರಂಭಿಸಿ ಸಾವಿರಾರು ನೊಂದ ಜೀವಗಳಿಗೆ ಆಸರೆಯಾಗಿತ್ತು. ಪ್ರವಾಹ ಸಂತ್ರಸ್ತರಿಗೆ ಮಾನವೀಯ ನೆರವು ನೀಡುವಂತೆ ಆರೆಸ್ಸೆಸ್ ಸಮಾಜ ಬಾಂಧವಲ್ಲಿ ಮಾಡಿದ ಮನವಿಗೆ ಸಾವಿರಾರು ಮಂದಿ ಸ್ಪಂದಿಸಿದ್ದಾರೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 97312 64009
ಪುಂಗವ ಚಂದಾ/ನವೀಕರಣ ಮಾಹಿತಿಗಾಗಿ ಸಂಪರ್ಕಿಸಿ : # 74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04.